REGISTERED NO. M—2736.

ಕರ್ನಾಟಕ ಕೇಸರಿ

ಪುಸ್ತಕಭ್ಯಸ್ತಪುಸ್ತಕರೋ! ಪುಸ್ತಕಸ್ಥವಿದ್ಯಾ ಪರಿಶ್ರಮಃ!
ಸಾರ್ವಕರ್ಸ್ಪರ್ಧಿಪುಸ್ತಕೇಷು! ಯಸ್ಯ ಸಾಮೇತಿ ಪಾಂಡಿತ್ಯ ॥ ಗಿ.ಕ. ಅ. ೧೦ ಶೋ - ೫೫

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.

ವಾರ್ಷಿಕ ಚಂದಾ
ಸ್ವದೇಶದವರಿಗೆ ... ೩—೪—೦
ಪರದೇಶದವರಿಗೆ ... ೩—೮—೨

ಸಂಪಾದಕ
ಟೀಕೂರು ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್.
(ವಿದ್ಯುಚ್ಛಕ್ತಿ ೨೦೮೦)

ಆರು ತಿಂಗಳಚಂದಾ.
ಸ್ವದೇಶದವರಿಗೆ .... ೧—೪—೨
ಪರದೇಶದವರಿಗೆ ....೧—೧೨—೦

ವರ್ಷ ೧ ಬಳ್ಳಾರಿ ನಗರ.—ಜನವರಿ ೪ನೇ ಸೋಮವಾರ ೧೯೨೮ ಸಂಚಿಕೆ ೧೨

ಮಹಾತ್ಮ ಗಾಂಧಿಯವರ ಬೊಂಬಾಯಿಯಲ್ಲಿನ ಭಾಷಣ.

"ನಾನು ಮತ್ತು ಕಾಂಗ್ರೆಸ್ ಸಭೆಯೂ ಯಾವಾಗಲೂ ಸಹಾಯವನ್ನೂ ದಗಿಸಲು ಸಿದ್ಧರಿದ್ದೇವೆ.
ಆದರೆ ಅಂಥ ವಾತಾವರಣವೆಲ್ಲಿದೆ?
ದಾರಿಯಲ್ಲಿ ಬರಬೇಕಾದರೆ ನಾನು ಮಾಡಿದ್ದ ಮಾನಸಿಕ ಆಲೋಚನೆಗಳೆಲ್ಲಾ
ಹಡಗಿಳಿದೊಡನೆಯೇ, ಮಾಯವಾದವು" (ಮಹಾತ್ಮ ಗಾಂಧಿ)

ಸೋಮವಾರ ರಾತ್ರಿ ವ್ಯಾಜೆಸ್ಟಿಕ್ ಹೋಟೆಲಿ ನಲ್ಲಿ, ನೇಷನಲ್ ಲಿಬರಲ್ ಫೆಡರೇಷನ್ ಎಂಬ ಸಂಘದವರು (ಈ ಸಭೆಯಲ್ಲಿ ಪ್ರಮುಖ ಇಂಗ್ಲೀಷರೂ, ಪ್ರಮುಖ ಪಟ್ಟಣಿಗರೂ ಇದ್ದಾರೆ) ಶ್ರೀಮತಿ ಸರೋಜಿನಿ ನಾಯ್ಡು, ಮತ್ತು ಸರ್ದಾರ್ ವಲ್ಲಭಭಾಯಿಪಟೇಲ ರೊಡನೆ ಆಲೋಚಿಸಿ, ಲಂಡನ್ ಕರಿಷತ್ತಿನ ಬಗ್ಗೆ ಸುಪ್ರೀಂಕೋರ್ಟ್ ಆಫ್ ಜಸ್ಟಿಸ್ ಗಳನ್ನು ತೆಗೆದುಕೊಳ್ಳಲು, ಒಂದು ಸಭೆಯನ್ನೇರ್ಪಡಿಸಿದ್ದರು ಸಭೆಯಲ್ಲಿ ಸೇರಿದ್ದ ದೊಡ್ಡ ಮುಖಂಡರುಗಳಿವರು:—

ಸರ್. ಸ್ಯಾಸ್ಸೂನ್ ಡೇವಿಡ್, ಮಿ ಕೋಸ್ಟ್, ಮಿ ಡೇವಿಡ್, ಪಿಟ್ಟಾಷ್, ಸರ್. ಫಿರೋಜ್‌ಷೇ ಮೆಹ್ತಾ, H. P. ಮೋದಿ, S. N. ಸಹ್ಯಾದ್ರಿವಾಲಾ ತಯಬ್‌ಜಿ, ಕರಾಂಜಿ, ಹೆ. ಕೆ. ಮೇಘಾ, ಡಾ. ದೇವತಮುಖ, ವಗೈರೆ.

ಮಹಾತ್ಮ ಗಾಂಧಿಯವರು ಸುಮಾರು ರಾತ್ರಿ 10 ಘಂಟೆಗೆ **ಸರ್ದಾರ್ ಪಟೇಲ, ಜಯಕರ್ ಡಾ. ಅನ್ಸಾರಿ, ಡಾ. ಆಲಂ, ನಾರಿಮನ್, ರಾಜೇಂದ್ರಪ್ರಸಾದ, ರಾಜಗೋಪಾಲಾಚಾರ್, ಮಹದೇವ ದೇಸಾಯಿ, ಶ್ಯಾರೇಲಾಲ್, ದೇವದಾಸ ಗಾಂಧಿ** ಮುಂತಾದ ಮುಖಂಡರೊಡನೆ ಬಂದರು. **ಸರ್. ಸ್ಯಾಸ್ಸೂನ್** ರವರೇ ಅಧ್ಯಕ್ಷತೆಯನ್ನು ವಹಿಸಿದರು.

ಮಹಾತ್ಮರ ಭಾಷಣ.

ನಾನು ಮಹತ್ವಸಬಗ್ಗೆ ನಿರ್ಧಾರದನೆ ಮಾಡಾಡಲು ನಿಶ್ಚಯಿಸಿದ್ದೆನು-ಆದರೆ ಬಂಗಾಳ ಸಂಯುಕ್ತಪ್ರಾಂತ, ವಾಯವ್ಯ ಪ್ರಾಂತಗಳಲ್ಲಿನ ರಾಜಕೀಯ ಪರಿಸ್ಥಿತಿಯಿಂದ ನನ್ನ ನಿಶ್ಚಯವನ್ನು ಒದಲಾಯಿಸಿ ಸದ್ಯದ ಆಲೋಚನೆಗಳ ಮೇಲೆ ಮಾತಾಡುತ್ತೇನು

ಪ್ರಧಾನ ಮಂತ್ರಿಗಳ ಪ್ರಕಟನೆಯಲ್ಲಿ ನನ್ನನ್ನು ತೃಪ್ತಿನೂಡಲು ಕಡಮೆ ಬೀಳುವ ಅನೇಕ ವಿಷಯಗಳಿದ್ದವು. ನಾನು ಬ್ರಿಟಿಷ ಮಂತ್ರಿಗಳಿಗೂ, ನನ್ನ ಅನೇಕ ಬ್ರಿಟಿಷ ಮಿತ್ರರಿಗೂ, ಹಿಂದೂಸ್ತಾನಕ್ಕೆ ಹೋದೊಡನೆಯೇ ಸಹಕರಿಸಲು ಮಾತು ಕೊಟ್ಟಿದ್ದೆನು.

ವಾಯುವ್ಯ ಪ್ರಾಂತ

ಅವರೆ ನನಗೆ ಇಲ್ಲಿ ಸಿಕ್ಕಿದ್ದೇನು? ಕಾಯುವ್ಯ ಪ್ರಾಂತದಲ್ಲಿ ವೀರ ಶಿರೋಮಣಿ ಅಬ್ದುಲ್‌ಗಫಾರರನ್ನು ಗಡೀಪಾರುಮಾಡಿ, ಪ್ರಾಣ, ಆಸ್ತಿಗಳ ಭಂಗಬರುವ ರೀತಿಯಲ್ಲಿ ಕಾನೂನುಗಳನ್ನು ಮಾಡಿರುವರು ಈ ಕಾನೂನುಗಳೆಂದ ' ಮಾರ್ಷಲ್ ಲಾ ' ಎಂದು ಘೋರ ಶಾಸ್ತ್ರವು ಸ್ಥಾಪಿತವಾಗಿದೆ. ಕೆಂಪಂಗಿಯ ಖುದಾಯಿ ಖಿದ್ಮತ್‌ಗಾರ್ ಎಂಬ ಸ್ವಯಂಸೇವಕರು ಕಾನೂನು ಭಂಗ ಮಾಡಿದರೆಂದು ಅವರನೇಲೆ ಬೆಂಕಿಯಗುಂಡುಗಳು ಸುರಿದವು. ಕಾನೂನು ಭಂಗಮಾಡುವ ಸತ್ಯಾಗ್ರಹಿಯು ಸಾಧಾರಣ ಲಾಗಳ ಪ್ರಕಾರ ಶಿಕ್ಷಿಸಲ್ಪಡುವನೆಂದು ಎಲ್ಲರೂ ಎಣಿಸುತ್ತಾರೆ ವೀರರಾದ ಖುದಾಯಿಖಿದ್ಮತ್‌ಗಾರರು ಕಾನೂನು ಭಂಗ ಮಾಡಿದರೆ, ಅವರನ್ನು ಸುಡುವುದು, ಎಷ್ಟಯ ಶಿಕ್ಷೆ!

ಸಂಯುಕ್ತ ಪ್ರಾಂತ

ಸಂಯುಕ್ತ ಪ್ರಾಂತದ ಕಡೆಗೆ ದೃಷ್ಟಿಯನ್ನೆಸಗಿ ನೋಡಿದರೆ, ಅಲ್ಲಿ ಯಾವವ್ಯಕ್ತಿಯೂ ಕಾನ್ಪೂರಿಗೆ ಬೀಳುವುದು.

ಆ ದೇಶದಲ್ಲಿ ಆರ್ಡಿನೆನ್ಸ್‌ಜಮ್ಮನ್ನನ್ನಲ್ಲಿ ಅಲೋಚಿಸಬೇಕಾದರೆಂದು ಲಾಹಿಲಾಲ್ ನನ್ನನ್ನು ಸಂಧಿಸಲು ಬೊಂಬಾಯಿಗೆ ಬರುತ್ತಿದ್ದಾಗಲೆ, ಪಂಡಿತ್ ಜವಹರಲಾಲ್ ನೆಹರುರವರು ಉತ್ತರನನ್ನು ಅವರನ್ನು ಹಿಡಿಮಬಿಟ್ಟರು ಶರ್ವಾನಿಯವರನ್ನೂ ಅವೇರೀತಿಯಲ್ಲಿಯೇ ಶಿಕ್ಷಿಸಲಾಗಿದ್ದಾರೆ.

ಬಂಗಾಳದ ದೃಶ್ಯ.

ಕೆಲವರ ಅಪಸಾಧಕ್ಕೆಂದು ಇಡೀ ದೇಶವನ್ನೇ, ಶಿಕ್ಷಿಸುವ ಪ್ರಯತ್ನ. ಈ ದೃಶ್ಯವು ಬಂಗಾಳದಲ್ಲಿ ಕಣ್ಣಿಗೆ ಬೀಳುತ್ತಿದೆ

ವಿಶ್ವಾಸವಿಲ್ಲ; ಸಹಕಾರವಿಲ್ಲ.

ನೆಲ್‌ಫೀಲ್ಡ್ ಲೀಗವ ಸದಸ್ಯರೇ!! ಇಂಥಾ ಸಂದರ್ಭಗಳಲ್ಲಿ ಕಾಂಗ್ರೆಸ್ಸಿನವರು ಏನುಮಾಡಬೇಕೆಂಬುದನ್ನು ನೀವೇ ತೀರಿಸಿರಿ. ವಾಯವ್ಯಪ್ರಾಂತ ಸಂಯುಕ್ತ ಪ್ರಾಂತಗಳಲ್ಲಿ ವಿಶೇಷ ಕಾನೂನುಗಳನ್ನು ನಾರಾಯಲ್ಲಿ ತಂದು, ಕಾಂಗ್ರೆಸ್ ಮತ್ತು ಅದರ ಕೆಲಸಗಾರರಲ್ಲಿ ನಂಬಿಕೆ ಇಲ್ಲದಂತೆ ವರ್ತಿಸುವವರಿಗೆ ಕಾಂಗ್ರೆಸ್‌ನವರು ಸಹಕಾರ ಕೊಡುವುದು ಹೇಗೆ?

ಪ್ರತಿಸರ್ಕಾರವನ್ನು ಏಕೆ ನಡಿಸಬಾರದು?

ಕಾಂಗ್ರೆಸ್ಸಿನ ಆಸಹಾಧವಾದರೂ ಏನು? ಕಾಂಗ್ರೆಸ್ಸಿನವರು ಪ್ರತಿಸರ್ಕಾರವನ್ನು ನಡೆಸುತ್ತಾರೆಂಬುದೇ! ಒನರಸಹಾನುಭೂತಿ, ಸಹಕಾರ ಮತ್ತು ಸತ್ಯ ಅಹಿಂಸೆಗಳಿಂದ ಕೂಡಿದ ಸರ್ಕಾರವನ್ನು; ಕಾಂಗ್ರೆಸ್ ಏಕೆನಡೆ ಸಬಾರದು? ಸರ್ಕಾರದವರ ಜೊತೆಗೆ ಆಸ್ಪತ್ರೆ, ಶಾಲೆಗಳು ವಗೈರೆ ಸ್ಥಾಪಿಸಿ ಆಳುವವರಿಗೂ; ಆಳಲ್ಪಡುವವರಿಗೂ ಮಧ್ಯೆ ಇವರು ಸೇತುವೆ ಇವ್ವಂತೆ ಇರಬಾರದೇಕೆ? ಇದರಲ್ಲಿ ತಪ್ಪಾದರೂ ಏನು? ಬುದ್ಧಿಯುಳ್ಳ ಸರ್ಕಾರವು ಕಾಂಗ್ರೆಸ್ ಸಹಕಾರವನ್ನು ಬೇಡದೆನ್ನುವುದಿಲ್ಲ.

(ಉಳಿದದ್ದು ಮುಂದಿನ ಪುಟದಲ್ಲಿ ನೋಡಿರಿ)

ಉತ್ತಮ ಜಮೀನು ಬಗ್ಗೆ

ಕಿರ್ಲೋಸ್ಕರ ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನ ಮಾಡುತ್ತದೆ.

ನೇಗಿಲುಗಳ ಸಿಫಾರಸ್ ಪತ್ರವೆಂದರೆ, ಒಕ್ಕಲಿಗರ ಸಂತೋಷ ಬೇರೆ ವಿಷಯವನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯ ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಪೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿರ್ಲೋಸ್ಕರ ಬಂಧುಗಳು, ಲಿಮಿಟೆಡ್

ಕಿರ್ಲೋಸ್ಕರವಾಡಿ

ಜಿ. ಸಾ ಬಾ ಲಿ.

ಪ್ರಕೃತಿಸಿದ್ಧವಾದ ಆಹಾರ

ಒಗತ್ತಿನಲ್ಲಿ ಗಿಡಗಳ ಮೇಲೆ ಸೂರ್ಯರಶ್ಮಿಯಿಂದ ತಯಾರಾದ ಹಣ್ಣುಕಾಯಿಗಳು ಧಾನ್ಯಂಗಳು, ಗೆಡ್ಡೆ ಗೆಣಸು ಮೊದಲಾದ ಆಹಾರಪದಾರ್ಥಗಳು ಅಕಸ್ಮಾತ್ ಹಾರವೆಂದು ಕರೆಯಲ್ಪಟ್ಟಿರುವುವು ಪಕ್ವಸ್ಥಿತಿಯಲ್ಲಿ ಪದವು ಅಗ್ನಿಯಿಂದ ಬೇಯಿಸಲ್ಪಟ್ಟಿಲ್ಲ ಎಂಬ ತಥ್ಯವಾಗುವುದಿಲ್ಲ. ಅಯಸ್ಕಾರಣ ನಿಷ್ಕಾಂತರು ಅವಕ್ಕೆ ಪಕ್ವ ಪದವನ್ನು ಕಂಡು ಹಿಡಿದರೆ ಹೆಸ್ಸಾಗರತ್ತಿ ಅದುವರೆಗೂ ಪ್ರಕೃತಿಸಿದ್ಧವಾದ ಆಹಾರವೆಂದು ಕರೆಯುವುದು ಸಮಂಜಸವಾಗಿತೋನುತ್ತದೆ

ಪ್ರಕೃತಿಸಿದ್ಧವಾದ ಸ್ವಾಭಾವಿಕ ಆಹಾರದ ಸಾರವಾಗಿ ತಿಳಿಯಿಲ್ಲ ಬೇಕೆಂದೆ, ಬಹಳ ಜನರು ಕುತೂಹಲವುಳ್ಳವರಾಗಿದ್ದಾರೆಂದರಿಂದ ತದ್ವಿಷಯವಾಗಿ ಕೆಲ ಮುಖ್ಯಾಂಶಗಳನ್ನು ಪ್ರಕಟಿಸಿರುವುದಾಗಿದೆ. ಧಾನ್ಯಗಳಲ್ಲಿನ ಸಾಮ್ಯವಾಗಿ ಗೋಧಿಯನ್ನೂ, ದ್ವಿದಳಧಾನ್ಯಗಳಲ್ಲಿ ಹಸೀಕಡಲೆ, ಹೆಸರು, ಬಟಾಣಿ, ಜಾಳಿಹಣ್ಣು, ತೊಗರಿಕಾಳುಗಳನ್ನೂ ಮುಖ್ಯವಾಗಿ ಆವರವರ ಪೌಷ್ಟಿಕತೆಗನುಸಾರವಾಗಿ ಎಂಗಡಿಸಿಕೊಂಡ ಕೆಲವರು ಭಾವಿಸಿದವರು ಕಾತ್ತೆ ಕೆಲವು ನೆಲಗಡಲೆಕಾಯಿ ಬಾದಾಮಿ, ಗೇರುಪಪ್ಪು, ಅಕ್ರೋಟ, ಪೊದಲಾದ ಬೀಜಗಳನ್ನು ಕೊಂಡು ತಿನ್ನುವರು ಮಾಂಸಾಹಾರಿಗಳಲ್ಲಿ ಗೋಧಿಯೊಂದೆ ಶ್ರೇಷ್ಠವಾದುದು. ನಾಡೀ ಶಕ್ತಿಯನ್ನು ಪೋಷಿಸುವುದಕ್ಕೆ ಗೋಧಿಯ ಬಹಳ ಒಳ್ಳೆಯದೆಂದು ಕೆಲವರು ಅಭಿಪ್ರಾಯಪಡುವರು. ದ್ವಿದಳ ಧಾನ್ಯಗಳಲ್ಲಿ ಹಸೀಕಡಲೆ, ಬಟಾಣಿ, ಹೆಸರುಕಾಳು ಒಳ್ಳೆಯವು ಹಸೀಕಡಲೆಯನ್ನು ಪ್ರತ್ಯೇಕವಾಗಿ ಅದಕ್ಕೆ ತಕ್ಕಷ್ಟು ನೀರಿನಲ್ಲಿ ನೆನೆಹಾಕಿದ್ದು ತಿಂದಲ್ಲಿ ಗುಣಕಾರಿಯಾಗಿರುವುದು ಒಂದುನೆಳೆ ಸೀರು ಹೆಚ್ಚಾಗಿದ್ದಲ್ಲಿ ಅದನ್ನು ಜಿಪಾಡದೆ ಜೀನು ಸೊರಿಯಾಗಲಿ ಬರಿದನ್ನೇ ಅಗಲಿ ಕುಡಿದರೆ ಶರೀರದಲ್ಲಿರುವ ಉಷ್ಣವು ಕಫಿಮೆಯಾಗುವುದು, ಶ್ವಾಯರಿಗೆ ಕೆಲವು ಸ್ಥಾಧಿಯನ್ನು ನಿವಾರಿಸುವುದು ಮತ್ತು ಸಪ್ಪವನ್ನು ಕೊಂಗಲಾಡಿಸುವುದು ಹೆಚ್ಚಿನಲ್ಲಿ ಜಾಳೆಹೆಣ್ಣು (ಮುದುರಪ, ಪುಟ್ಟಜಾಳೆ, ರಸಬಾಳೆ) ಶ್ರೇಷ್ಠವು. ಚೆಪ್ಪು ಸಹಿತವಾದ ಕಾಯಿಗಳಲ್ಲಿ ತೆಂಗಿನಕಾಯಿ ಒಳ್ಳೆಯದು ಇವುಗಳಲ್ಲದೆ ಇತರ ಹಣ್ಣುಗಳೂ ಕಾಯಿಗಳೂ ಅವರವರ ಶಕ್ತಿಗನುಸಾರವಾಗಿ ಸೇವಿಸಲ್ಪಡಬಹುದು.

ಈ ಲೇಖನದಲ್ಲಿ ಬೆಂಕಿಯಿಂದ ಸಂಸ್ಕರಣಮಾಡಲ್ಪಟ್ಟ ವುಗಳಿಗೂ ಸ್ವಕೃತಿಸಿದ್ಧವಾದವುಗಳಿಗೂ ಇರುವ ವ್ಯತ್ಯಾಸವು ತಿಳುಹಲ್ಪಡದವುದು ಡಾಕ್ಟರ್ ಜೆ ಬಿ. ಡ್ರೂಸ್ ಎಂಬವರು ಟೋಲೊತರಪೀ ಗ್ರಂಥದಲ್ಲಿ ಈ ಕೆಳಗಿನ ವಿಷಯಗಳನ್ನು ತಿಳಿಸಿರುತ್ತಾರೆ.

ಮಾಂಸ ಎಕ್ಕತ್ತಗಳು ಇಷ್ಟಿದಿರುವ ಪ್ರೋಟೀನ್ಸು — ಅಗ್ನಿಯಿಂದ ವಿಜನವಾಗದಿರುವ ದ್ವಿದಳ ಧಾನ್ಯಗಳು (ಹಸೀಕಡಲೆ ಬಟಾಣಿ) ಏಸ್ಟೆ ತೆಗೆಯದಿರುವ ದ್ವಿದಳ ಬಾಳೆಗಳು ಜೀರ್ಣಕೋಶದಲ್ಲಿ ಹೊಸಾನ್ನ ಹೊಗಲಾಡಿಸಿ ಆಹಾರ ಪದಾರ್ಥಗಳನ್ನು ಪೂರ್ಣವಾಗದಂತೆ ಮಾಡುವುವು ಮಾಂಸಾಲು ಆಹಾರವಿಷ್ಟಸ್ಥಿತಿಗೆ ಬರಿಸಿನ್ನು ಅಧಿಕವಾಗಿರುವುದರಿಂದ ಅಗುನ ಲಕ್ಷಣಗಳನ್ನು ಗೃಹ ಇದರಿಂದುಂಟಾಗುವುದಿಲ್ಲ, ಜೀರ್ಣಕಾಲದ ಪ್ರಕ್ರಿಯಾಕಾಲಕ್ಕೆ ಸ್ವಾಭಾವಿಕವಾದ ಪದಾರ್ಥಗಳನ್ನು ಸೂರೆಬಿಡುವುದು ಹೀಗೆ ಅಧಿಕವಾದ ಪದಾರ್ಥವು ಮತ್ತಾವ ಪ್ರಾಣಿಯಿಂದಲೂ ಶರೀರದಲ್ಲಿ ಸ್ಥಾಪಿತಿಸುವುದಿಲ್ಲ. ಕೊಳೆಯುವುದಿಲ್ಲ ಅದರೆ ಬೇಯಿಸಲ್ಪಟ್ಟು ಕಾಲ ದಿರಿಸಿಗಳು ಅವುಗಳಲ್ಲಿರುವ ಕ್ಷಾರ ಗುಣವನ್ನು ಹಾಳು ಮಾಡುವುದರಿಂದ ಜೀರ್ಣ ಕೋಶದಲ್ಲಿ ಕೊಳೆಯಲು ಪ್ರಾರಂಭಿಸುವುದು ಅಲ್ಲದೆ ಕರುಳುಗಳಲ್ಲಿ ಕೊಳೆತು ವಿಷವಾಯುತ್ಪನ್ನಮಾಡಿ ಶರೀರದಲ್ಲಿ ಅದನ್ನು ವ್ಯಾಪನೆಗೊಳಿಸಿ ಮಲಬದ್ಧತೆ ತಜೀರ್ಣ ಮೊದಲಾದ ಅನೇಕ ವ್ಯಾಧಿಗಳಿಗೆ ಕಾರಣವಾಗುವುದು ಬೆಯಿಸಿದಿರುವ ಪದಾರ್ಥವು ಶರೀರದಲ್ಲಿ ಉಪಯೋಗಿಸುವುದಕ್ಕಿಂತ ಒತಳ ಹೆಚ್ಚಾಗಿ ಮಿಸ್ರಗಳಲ್ಲಿ ಸೇರಿ ಫಟ್ಟಯಾಗಿ ಯಂತ್ರಿಕ ಅತಿಶ್ರಮ ಮೊದಲಾದ ಸಹನವನ್ನು ಹೆಚ್ಚಿಸುವುದು

ಹಸಿಟ್ಟು ಪದಾರ್ಥಗಳು, ಸ್ವಾಭಾವಿಕ — ಸೃಷ್ಟಿತಿ ಸಂಬಂಧವಾದ ಧಾನ್ಯಂಗಳಂದಲೂ. ಗೆಡ್ಡೆಗೆಣಸು ಮೊದಲಾದವುಗಳಂದಲೂ ತೆಗೆಯಲ್ಪಡುವ ಹಸಿಟ್ಟು ಊಟಕ್ಕೆ ಯೋಗ್ಯವಾದ ಪಿಟ್ಟಿನ ಪದಾರ್ಥವು (ಸ್ಟಾರ್ಚ್), ಹಸಿಟ್ಟಿನಿಂದ ಮಾಡಲ್ಪಟ್ಟ ಪದಾರ್ಥಗಳು ಜೀರ್ಣವಾಗಬೇಕಾಗಿನಲ್ಲಿ ಬಾಯೊಳಗಿನ ಲಾಲಾಜಲವು ಅಂತರ್ಸವಡೆಸಿ ಸಮ್ಮಿಳಿತವಾಗಬೇಕು ಆಗಲೆ ಶರೀರಕ್ಕೆ ಅವರ ಕವಾದುದನ್ನು ಲಾಲಾಜಲವು ಅಂತರ್ಸವ ಮಾಡಿಕೊಡುವುದು ಬದಲಾಯಿಸಿ ಶರೀರಕ್ಕೆ ಸಿಸಿಯೋಗವಾಗುವುದು ಬೇಯಿಸಿದ ಪದಾರ್ಥವು ಬೇಯಿಸಿದ ಪದಾರ್ಥವು ಮಾಡಿ ಸುಲಭವಾಗಿ ಕೆಡುವುದಿಲ್ಲ

ಬೇಯಿಸಿದ ಪಿಟ್ಟಿನ ಪದಾರ್ಥವು ಸುಲಭವಾಗಿ ಜೀರ್ಣವಾಗುವುದು, ಈ ಸ್ಥಿತಿಯಲ್ಲಿರುವ ಪದಾರ್ಥಗಳು ಶರೀರದಲ್ಲಿ ಬಹಳ ನಿಸ್ತಾಪವಾಗಿ ಜೀರಿತು ಹೋಗುವುದು ಶರೀರಕ್ಕೆ ಬೇಕಾದ ಪೆಚ್ಚಿಂತ ಹೆಚ್ಚಾಗಿ ರಕ್ತದಲ್ಲಿ ಕೊಬ್ಬಿನಾಂಶವಿಸ್ಥ ಪದಾರ್ಥವು ಇಲ್ಲದೆ ಭಿಂಬಿಸುವುದು ಭೂಕಾಯಾಮಾಡಲು ಬಹಳವಾಗಿ ಸ್ಥಾಣವಾಯುವ ಬೇಕಾಗುವುದು ಆ ಕಾರಣದಿಂದ ಶ್ವಾಸಕೋಶಕ್ಕೆ ಹೆಚ್ಚು ಶ್ರಮವುಂಟಾಗುವುದು

ಜೀರ್ಣಕೋಶದಲ್ಲಿ ಕರಳಿನಲ್ಲಿ ಉಂಟುಮಾಡುವ ಬೇಯಿಸಿದ ಹಿಟ್ಟಿನ ಪದಾರ್ಥ (ಅನ್ನ ಮೊದಲಾದವು) ಬಹಳ ಜಾಗ್ರತೆಯಲ್ಲಿ ಕೆಡಲುಶಕ್ಯವಿಸುವುದು.

(ಮುಂದಿನ ಪ್ರಟದಲ್ಲಿ ಮುಂದುವರಿಯಿದೆ)

ಪ್ರಕೃತಿಸಿದ್ಧವಾದ ಆಹಾರ

೨ ನೇ ಪುಟದಿಂದ ಮುಂದುವರಿದಿದ್ದು.

ಕೊಬ್ಬು (ಜಿಡ್ಡು) ಎಣ್ಣೆ:—ಕೊಬ್ಬರಿ, ಆಕ್ರೋಟು, ಗೇರುಪಪ್ಪು ಮೊದಲಾಗಿ ದ್ವಿದಳ ಬೀಜಗಳಲ್ಲಿರುವ ಎಣ್ಣೆಯು ನೀರಿನಲ್ಲಿ ಕಲೆತು ಹಾಲುರೂಪದಲ್ಲಿದ್ದು ಶರೀರದಲ್ಲಿ ಸುಲಭವಾಗಿ ಉಪಯೋಗವಾಗುವ ಸ್ಥಿತಿಯಲ್ಲಿ ಇರುವುದು. ಅಗ್ನಿ ತಪ್ತವಾದ ಎಣ್ಣೆಯೂ, ಮಜ್ಜವೂ ಸುಲಭವಾಗಿ ಜೀರ್ಣರಸದಲ್ಲಿ ಸೇರದೆ ಲೀವರಿ (ಎಕೃತಿ) ಗೆ ಬಹಳ ತೊಂದರೆಯನ್ನುಂಟು ಮಾಡುವುದು.

ಸಕ್ಕರೆ:—ಸ್ವಾಭಾವಿಕವಾಗಿ ಹೆಣ್ಣೆನಲ್ಲಿರುವ ಸಕ್ಕರೆಯು ಬಹಳ ಜಾಗ್ರತೆಯಲ್ಲಿ ಶರೀರಕ್ಕುಪಯೋಗವಾಗುವುದು. ಅಗ್ನಿಯಿಂದ ತಯಾರಿಸಲ್ಪಟ್ಟ ರವೆ, ಸಕ್ಕರೆ, ಚೀನಾಸಕ್ಕರೆ, ಬೆಲ್ಲ ಇವುಗಳ ಬೆರಕೆಯಿಂದ ಬೇಯಿಸಲ್ಪಟ್ಟ ಹಿಟ್ಟಿನ ಪದಾರ್ಥಗಳು ಆಹಾರನಾಳದೊಳಗಿರುವ ಆಮ್ಲತ್ವವನ್ನು ಉದ್ರೇಕಗೊಳಿಸಿ ಕ್ಲೇಶವನ್ನು ಪ್ರಕೋಪಗೊಳಿಸುವುದು, ಜೀರ್ಣಕೋಶದಲ್ಲಿ ಸುಲಬದ್ಧತೆಯನ್ನುಂಟುಮಾಡಿ ಅಜೀರ್ಣಕ್ಕೆ ಕಾರಣಭೂತವಾಗುವುದು.

ತರಕಾರಿ ಮತ್ತು ಹಣ್ಣು ಹಂಪಲು:———— ತರಕಾರಿ ಮತ್ತು ಹೆಣ್ಣುಗಳ ವಿಟಮಿನ್ನೂ, ಕ್ಷಾರಪದಾರ್ಥಗಳೂ ಸಜೀವವಾದ ಪದಾರ್ಥಗಳಂತೆಯೇ ಯಥಾಪ್ರಕಾರವಾಗಿ ಶರೀರದಲ್ಲಿ ಉಪಯೋಗವಾಗುವುವು. ಬೇಯಿಸಿದ ಪದಾರ್ಥಗಳಲ್ಲಿ ಈ ದ್ರವ್ಯಗಳು ಶರೀರಕ್ಕೆ ವಿನಿಯೋಗಪಡಲು ಬೇಕಾದ ಸಹಜ ಸ್ಥಿತಿಯನ್ನು ತಾರುಮಾರಾಗಿ ನಾಶಮಾಡುವುದು. ನಿಟ್ಟಿನಿನೂ ಲವಣ ಪದಾರ್ಥಗಳೂ ಅತಿ ಸೂಕ್ಷ್ಮ ಸ್ಥಿತಿಯಲ್ಲಿರುವುವು, ಇತ್ತ ಶರೀರದ ವಿಷವನ್ನು ಹೋಗಲಾಡಿಸುವುವು. ನೀರಿನ ಪರಿಮಾಣಕ್ಕೆ ಸಹಾಯವಾಗುವುದು. ಶರೀರದಲ್ಲಿರುವ ಜೀರ್ಣರಸದೊಡನೆ ಸಂಯೋಗವಾದಾಗ್ಗೆ ಅದರಿಂದ ಹೊಸ ಶಕ್ತಿಯೆ ದ್ರವ್ಯಗಳೂ ಏರ್ಪಟ್ಟು ಶರೀರವನ್ನು ಪೋಷಿಸುವುದು. ಈ ನೂತನ ಶಕ್ತಿಯೂ ದ್ರವ್ಯಗಳೂ ವ್ಯರ್ಥವಾಗಿ ನಿರ್ಜೀವ ಪದಾರ್ಥಗಳುಮಾತ್ರ ಉಳಿಯುವುವು.

ಹಿಟ್ಟು ಪದಾರ್ಥ-ಕೆಲ್ಯುಲೊಸಾ:—ಆಹಾರ ವಸ್ತುಗಳಲ್ಲೆಲ್ಲಾ ಕೊಂಚ ಹಿಟ್ಟು ಪದಾರ್ಥವಿರುವುದು. ದ್ವಿದಳ ಧಾನ್ಯಗಳಲ್ಲೂ ಹಣ್ಣುಗಳಲ್ಲೂ ಹೆಚ್ಚಾಗಿರುತ್ತದೆ ಇದರ ಸಹಾಯದಿಂದ ಕರಳು ಆಹಾರ ಪದಾರ್ಥಗಳನ್ನು ಬಹಳ ಸುಲಭವಾಗಿ ಕದಲಿಸಬಲ್ಲದು. ಒಳಗಡೆ ಇರುವ ಕ್ರಿಮಿಚಲನೆ ಶಕ್ತಿಯನ್ನು ಉದ್ದೀಪನಗೊಳಿಸುವುದು. ಒಳಗಿರುವ ವಿಷ ಪದಾರ್ಥವನ್ನು ಆಕರ್ಷಿಸಿ ಬಹಿರ್ಗತ ಮಾಡುವುದು. ಬೇಯಿಸಲ್ಪಡದ ಹಿಟ್ಟಿನ ಪದಾರ್ಥಗಳನ್ನು ಸುಲಭವಾಗಿ ನುಂಗಲಿಕ್ಕೆ ಆಗುವುದಿಲ್ಲ. ಇದು ಜಾಗ್ರತೆಯಲ್ಲಿ ಕರುಳನಲ್ಲಿ ವಿಷವನ್ನೂ ವಿಷಕ್ರಿಮಿಗಳನ್ನುಂಟುಮಾಡುವುದು.

ಆರ್ನಲ್ಡ್ ವಿಹರೆಟ್ ಎಂಬ ಜರ್ಮನಿಯವನು ಪ್ರಕೃತಿಸಿದ್ಧಾಹಾರ ಸಂಬಂಧವಾಗಿ ಅನೇಕ ಪರಿಶೋಧನೆಯನ್ನು ಮಾಡಿದ್ದಾನೆ. ಪಾಶ್ಚಾತ್ಯ ವೈದ್ಯವಿಜ್ಞಾನವೆಲ್ಲ ಪಶುಗಳ ಮೇಲೂ ಶವಗಳ ಮೇಲೂ ನಡೆಸಿದ ಪ್ರಯೋಗಗಳ ಫಲವಲ್ಲದೆ ಜೀವಂತರಾದ ಮನುಷ್ಯರ ಮೇಲೆ ಮಾಡಿದ ಪರಿಶೋಧನ ಸ್ಫಲವಲ್ಲ. ಈ ಕಾರಣದಿಂದ ಅನೇಕ ಸಂದರ್ಭಗಳಲ್ಲಿ ಪಾಶ್ಚಾತ್ಯ ವೈದ್ಯವಿಜ್ಞಾನವು ಬಹಳ ದೋಷಯುಕ್ತವಾಗಿಯೂ ಅಪಾಯಕರವಾಗಿಯೂ ಪರಿಣಮಿಸುತ್ತಿರುವುದು. ಆದುದರಿಂದ ನಾವು ಈ ಪರಿಶೋಧನೆಗಳ ಮೇಲೆ ಆಧಾರ ಪಟ್ಟು ಕೊಂಡಿರಬಾರದು.

ಮೈ. ಸ್ವಾ.

ಮಹಾತ್ಮ ಗಾಂಧಿಯವರ ಬೊಂಬಾಯಿಯಲ್ಲಿನ ಭಾಷಣ.

(ಒಂದನೇ ಪುಟದಿಂದ ಮುಂದುವರಿದಿದ್ದು.)

50 ವರ್ಷಗಳು ಜೀವಂತವಾಗಿದ್ದು, ಹೊಮ್. ಮೆಂಬರ್ಸ್, ಮುಂತಾದ ಆಂಗ್ಲೇಯ ಶಿಖಾಮಣಿಗಳಂತೆಲ್ಲೂ, ದಾದಾಬಾಯಿ ನವರೋಜಿಯವರಂಥ ದೇಶಭಕ್ತರಿಂದಲೂ, ಪರಿಪೋಷಿತವಾದ ಈ ಕಾಂಗ್ರೆಸ್ ಸಂಸ್ಥೆಗೆ ಪ್ರತಿ ಸರ್ಕಾರವನ್ನು ನಡೆಸುವ ಶಕ್ತಿ ಇಲ್ಲವೆಂದರೆ ನಾಚಿಕೆ ಗೇಡಾಗುವುದು. ಕಾಂಗ್ರೆಸ್ಸಿನವರನ್ನು ಉಗ್ರವಾದಿಗಳೆಂದು ನೀವು ಕರೆಯಬಹುದು ಆದರೆ ಅವರಲ್ಲಿ ನಿಧಾನವಾಗಿಯೂ, ಸೂಕ್ಷ್ಮವಾಗಿಯೂ ಆಲೋಚಿಸುವ, ಮತ್ತು ಇಂಡಿಯಾದ ಅಭಿವೃದ್ಧಿಯು ಶೀಘ್ರವಾಗಿ ಆಗಬೇಕೆಂದು ಅಪೇಕ್ಷಿಸುವ, ಜವಾಬ್ದಾರೀ ಪ್ರಮುಖರೂ, ಇದ್ದಾರೆಂಬುದನ್ನು ಮರೆಯಬೇಡಿ ಪ್ರಜೆಗಳಿಗೆ ಕಾನೂನುಗಳನ್ನು ಗೌರವಿಸಬೇಕೆಂದು ಕಾಂಗ್ರೆಸ್ಸಿಗೂ ಕೂಡ ಅಪೇಕ್ಷೆ ಇದೆ, ಸರ್ಕಾರವೇ ತಪ್ಪು ದಾರಿ ಹಿಡಿದಾಗ, ಅದನ್ನು ಧಿಕ್ಕರಿಸುವದೆ, ಅದೇ ಸರ್ಕಾರಕ್ಕೇ ದೊಡ್ಡ ಉಪಕಾರ ಮಾಡಿದಂತಾಗುವುದೆಂಬುದನ್ನು ಜ್ಞಾಪಕದಲ್ಲಿಡಬೇಕು.

ಈ ಹಿಂದಿನ ಬೊಂಬಾಯಿ ಗವರ್ನರ್ ಸಾಹೇಬರು, ಕ್ಷಾಮ ಮತ್ತು ಪ್ರವಾಹನಷ್ಟ ನಿವಾರ್ಥವಾಗಿ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದಾಗ, ಅದನ್ನು ಹಂಚಲು ಸರ್ದಾರ ಪಟೇಲರೂ, ಅವರ ಕೆಲಸಗಾರರೂ, ತಮ್ಮತನುಮನಧನಗಳನ್ನರ್ಪಿಸಿ ಕೆಲಸಮಾಡಿ ಧನ್ಯವಾದಗಳನ್ನು ಪಡೆದರು. ಅಸಹಕಾರಿಗಳಾಗಿ ಸರ್ದಾರರು ಅಹಮ್ಮದಾಬಾದ್ ಮುನಿಸಿಪಾಲಿಟಿ ಕೆಲಸ ನಡೆಸಿದಾಗ, ಸರ್ಕಾರದಿಂದ ಅವರಿಗೆ ಧನ್ಯವಾದ ದೊರೆಯಿತು. ಪಂಡಿತ ಜವಾಹಿರಲಾಲರೂ,ಕೂಡ ಅಲಹಾಬಾದ್ ಮುನಿಸಿಪಾಲಿಟಿ ಕೆಲಸ ನಡೆಸಿ ಒಳ್ಳೆಯ ಪೆಸರು ಪಡೆದರು. ಇದನ್ನೆಲ್ಲಾ ಮರೆಯಬೇಡಿ

ಅಂದಮೇಲೆ ಕಾಂಗ್ರೆಸ್ಸಿನಂಥ ಬಲಿಷ್ಠ ಸಂಸ್ಥೆಯು ಪ್ರಜೆಗಳನ್ನೂ, ಸರ್ಕಾರವನ್ನೂ, ತನ್ನ ಸೇವಾವೃತ್ತಿಯಿಂದ ನಡೆಸಿಕೊಳ್ಳವುದರಲ್ಲಿ ಏನು ತಪ್ಪಿದೆ ?

ವಿಶೇಷ ಕಾನೂನುಗಳು ಹೋಗಬೇಕು.

ಸ್ವತಃ ನಾನು ಸಹಕರಿಸುವುದಕ್ಕೆಮೊದಲು ಕಾಂಗ್ರೆಸ್ಸಿನವರನ್ನು ಸಹಾಯ ಮಾಡಿರೆಂದು ಹೇಳುವಮೊದಲು, ಈ ಆರ್ಡಿನೆನ್ಸುಗಳು ತೊಲಗಬೇಕು ಬಂಗಾಳಯ. ಪಿ. ಮತ್ತು ಫ್ರಾಂಟಿಯರ್ ದೇಶಗಳಲ್ಲಿ ಶಾಂತಿಯ ಪುನಃ ಸ್ಥಾಪಿತವಾಗಬೇಕು. ಕಾನೂನುಗಳು ತೊಲಗಲು ನನ್ನೆಯತ್ನವನ್ನೆಲ್ಲಾ ಮಾಡಬಲ್ಲೆನು ಆದರೆ ನಾನೇನು ಮಾಡಲಿ ? ಕಾಂಗ್ರೆಸ್‌ನಿನುನಾಡಬೇಕು ? ಸಹಕಾರ ಮಾಡುವುದಿಲ್ಲವೆಂದು ಹೇಳಿಬಿಡಲೇ ? ಈ ವಿಶೇಷ ಕಾನೂನುಗಳು ದೇಶದಲ್ಲಿದ್ದು, ದೇಶವು ನರಳುತ್ತಿರಬೇಕಾದರೆ, ನಾನು ಸರ್ಕಾರದವರೊಡನೆ ಸಹಕರಿಸಿ, ಪುನಃ ಹೊಸದಾಗಿ ನನ್ನ ಚರಿತ್ರೆಯನ್ನು ಬರೆಯಲೇ ?

ಲಾರ್ಡ್ ವಿಲ್ಲಿಂಗ್ಡರು, ಲಾರ್ಡ್ ಇರ್ವಿನ್ ಸಾಹೇಬರನ್ನು ಮೀರಿಸಿದರು.

ಲಾರ್ಡ್ ಇರ್ವಿನ್ ಸಾಹೇಬರು 11 ವಿಶೇಷಕಾನೂನುಗಳನ್ನು ಮಾಡಿದರೆ ವಿಲ್ಲಿಂಗ್ಡರ್ ಸಾಹೇಬರು, 13 ವಿಶೇಷ ಕಾನೂನುಗಳನ್ನು ಮಾಡಿಡುವರು. ವ್ಯತ್ಯಾಸವೆಂಥಾದ್ದು. ಅವರ ಕಾನೂನುಗಳಿಗಿಂತಲೂ, ಭೀಕರವಾಗಿದ್ದು, ಬಂಗಾಳ ಯು. ಪಿ. ಫ್ರಾಂಟಿಯರ್ ದೇಶಗಳಲ್ಲಿ, ಮಾರ್ಷಲ್ ಲಾ ಎಂಬ ಘೋರ ಕಾನೂನು ಸ್ಥಾಪಿತ ಮಾಡಿದಂತಿನೆ.

ಖಾನ್ ಅಬ್ದುಲ್ ಗಫರ್ ಖಾನರವರ ಅಪರಾಧ

ಗಫರ್ ಖಾನರವರು, ಪ್ರಾಮಾಣಿಕರೂ ವೀರ ಪಠಾಣರು ಸರ್ಕಾರದ ಅಧಿಕಾರಿಯು ಇದನ್ನು ಅಲ್ಲಗಳೆಯ ಲಾರನು ಫ್ರಾಂಟಿಯರ್ ದೇಶಕ್ಕೂ, ಹಿಂದೂಸ್ಥಾನಕ್ಕೂ, ಸ್ವತಂತ್ರ ಬೇಕೆಂಬ ಅವರ ಮಹತ್ವ ಕಾಂಕ್ಷೆಯೇ ಅವರನ್ನು ಅಪರಾಧಿಗಳನ್ನಾಗಿ ಮಾಡಿತು. ಅವರು ಹಾಗೆ ಏನೇಕ್ಷಿಸಿದುದರಲ್ಲಿ ಏನಾದರೂ ತಪ್ಪು ಉಂಟೋ ? ಚೀಫ್ ಕಮೀಷರ್‌ರವರು ಏರ್ಪಡಿಸಿದ ದರ್ಬಾರಿಗೆ ಅವರು ಹೋಗಲಿಲ್ಲ. ಆ ದೇಶದಲ್ಲಿ ಸುಧಾರಣೆಗಳನ್ನು ತರುವ ನೆವದಲು ಇದೆಂಥಾ ದುರ್ದೈವ !

ಸಂಯುಕ್ತ ಪ್ರಾಂತ್ಯಪಶ್ಚಿಮಕ್ಕೆ ಕೂಡ, ಧೈರ್ಯಗೆ ತನ್ನ ಬೆಳೆಯಿಂದ, ತಾವು ಖರ್ಚು ಮಾಡಿದಷ್ಟು ಹುಟ್ಟದೆ, ಕಂದಾಯ ಮಾಫಿ ಮಾಡಬೇಕೆಂದು ಸರ್ಕಾರಪರವರನ್ನು ಕೇಳಿ ಕೊಂಡರು. ಸರ್ಕಾರದವರು ಕೇಳಲಿಲ್ಲ. ಇವರು ಅಲ್ಪ ಸ್ವಲ್ಪ ಆಸ್ತಿಯನ್ನು ಮಾರಿ, ಕಂದಾಯ ತೊಟ್ಟು ನಗರತಿರಾಗುವುದಕ್ಕಿಂತ ಕಂದಾಯವನ್ನು ಕೊಡಬೇಡೆಂದು ಹೇಳುವುದು ಒಂದು ಅಪರಾಧವಾಗಿದೆ

ಚಂಪಾರಣ್ಯದ ಕತೆ.

ನಾನು ಚಂಪಾರಣ್ಯಕ್ಕೆ ಹೋದಾಗ, ಅಲ್ಲಿದ್ದ ಇಂಗ್ಲೀಷ್ ಪ್ಲಾಂಟರ್‌ಗಳು, ಇಷ್ಟಿನ ಆರ್ಥಿಕ ಪರಿಸ್ಥಿತಿಯಲ್ಲಿ ನೀವು ಕೈ ಹಾಕ ಬಾರದೆಂದು ಹೇಳಿದರು ನಾನು ಸರ್ಕಾರದವರು ನಾನು ಹೋಗದಂತೆ ಪ್ರತಿ ಬಂಧಿಸಿದರು. ನಾನು ಆ ಹುಕುಮನ್ನು ಧಿಕ್ಕರಿಸಿ, ಅಲ್ಲಿಗೆ ಹೋದೆನು ತಮಗೆ ವರ್ಷ ಗಟ್ಟಲೆ ಬೇರೆ ಹರಿಯದ ಸಮಸ್ಯೆಯು, ಆರು ತಿಂಗಳಲ್ಲಿ ಸರಿ ಹೋಯಿತೆಂದು ಸರ್ಕಾರದವರೇ ಕೊನೆಯಲ್ಲಿ ಒಪ್ಪಿಕೊಂಡರು.

ಬಂಗಾಳಾದಲ್ಲಿ.

ಬಂಗಾಳಾದಲ್ಲಿ ನಡೆಯುತ್ತಿರುವ ಹತ್ಯೆಗಳು ಸಹಸಲಸಹ್ಯವಾಗಿವೆ. ಯಾವ ಸಮಾಜವೂ ಕೊಲೆಯನ್ನು ಸಹಿಸಲಾರದೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಕೊಲೆಯ ವಿಷಯದಲ್ಲಿ ಯಾವ ರೀತಿಯಿಂದ ವರ್ತಿಸಬೇಕು, ನಾನು ಇಂಡಿಯಾ ಸರ್ಕಾರದ ಕಾರ್ಯದರ್ಶಿಯಾಗಿದ್ದಾಗ್ಯೆ ನ್ಯಾಯವೇ ಆಥವಾ ಗೌರ್ನರೇ ಆಗಲೀ ಬಂಗಾಳದ ವಿಶೇಷ ಕಾನೂನನ್ನು ನನಗೆ ಕಳುಹಿಸಿದ್ದರೆ ನಾನು ಅವರಿಗೆ ರಾಜೀನಾಮೆ ಕೊಡಲು ಬರೆಯತ್ತಿದ್ದೆನು.

"ಸಾಕಾದಷ್ಟು ಪೋಲೀಸ್ ದಳವೂ, ಬೇಕಾದಷ್ಟು ಕಾನೂನುಗಳೂ, ನಿಮ್ಮ ಅಧೀನ ವರ್ತಿಯಾಗಿಲ್ಲವೇ ? ಸರ್ಕಾರದ ಸಹಕಾರಿಗಳಷ್ಟು, ಶತ್ರುಗಳನ್ನೂ, ಕೂಡಿಸಿ ಕೊಲೆಗಳನ್ನು ಮೂಲೋತ್ಪಾಟನ ಮಾಡಿರಿ. ಕೊಲೆಮಾಡುವವರನ್ನು ಮಾತ್ರ ಸಿಕ್ಕಿಸಿರಿ. ಆದರೆ ಪ್ರಾಂತ್ಯವನ್ನೆಲ್ಲಾ ಶಿಕ್ಷಿಸಲುಕೂಲವಿರುವ ಅಧಿಕಾರಗಳನ್ನು ಕೇಳಬೇಡಿರಿ.

ಮುಖ್ಯಮಾರ್ಗಗಳು.

ಎಲ್ಲಾ ಪ್ರಾಣಗಳೂ ಅದರಲ್ಲಿಯೂ, ಇಂಗ್ಲೀಷಿನವರ ಪ್ರಾಣಗಳು, ಶ್ರೇಷ್ಠವಾನಿವೆ. ಆದರೆ ಅವುಗಳನ್ನು ರಕ್ಷಿಸುವುದಕ್ಕೆ ಉಪಾಯಗಳಿವೆ. ಒಂದನೆಯದು ಡೈಯರ್ ಕ್ರಮ ಜನರಲ್ ಡೈಯರ್ ಹಿಂದೂಸ್ಥಾನದಲ್ಲಿ ಇಂಗ್ಲೀಷಿನವರ ಪ್ರಾಣಗಳನ್ನು ಉಳಿಸಬೇಕಾದರೆ ಜಲಿಯನ್ವಾಲಬಾಗದಲ್ಲಿ ಘೋರ ಕೊಲೆಯನ್ನು ಮಾಡಬೇಕೆಂದು ಪ್ರಮಾಣಿಕ ರೀತಿಯಿಂದ ನಿಶ್ಚೈಸಿದನು. ಆದರೆ ಅವನ ನಂಬಿಕೆಯು ತಪ್ಪಿದ್ದಿತು. ಇದರ ಮೂಲ ಕಾರಣಗಳನ್ನು ನೀವು ಪರೀಕ್ಷಿಸಬೇಕು. ಹಿಂಬಲಿ ಚಿಟ್ಟಗಾಂಗ ಕೃತ್ಯಗಳನ್ನು ಜ್ಞಾಪಿಸಿಕೊಳ್ಳಿರಿ. ಬಂಗಾಳದ ಯುವಕರು ಧೈರ್ಯಶಾಲಿಗಳಾಗಿಯೂ, ದೇಶಾಭಿಮಾನಿಗಳಾಗಿಯೂ ಕ್ಷಣದಲ್ಲಿಯೇ ಕೋಪಾವಿಷ್ಟರಾಗಿಯೂ ಆಗುವರು. ಕೆಲವರ ಅಪರಾಧಕ್ಕೆಂದು ಇಡೀ ದೇಶವನ್ನೇ ಶಿಕ್ಷಿಸೀಡುಮಾಡುವುದು ಸರಿಯಾದ್ದಲ್ಲ.

ಸೂಚನೆ:— ಚಾತ್ತಿನಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬಂಶವನ್ನು ಎಲ್ಲರೂ ತಿಳಿಯಬೇಕು **ಸಂಪಾದಕ ಕ. ಕೇ**

ಚಂದಾದಾರರಲ್ಲಿ ವಿನಂತಿ.

ನಾವು ಮೂರು ತಿಂಗಳಿಂದಲೂ, ತಮಗೆ ಪತ್ರಿಕೆಗಳನ್ನು ಕಳುಹಿಸುತ್ತಾ ಬಂದಿರುತ್ತೇವೆ. ಚಂದಾ ಹಣವನ್ನು ನಾವು ಕೇಳುಹಿಸಿಲ್ಲ. ವಿ. ಪಿ. ಮೇಲೆ ಕಳುಹಿಸುವುದು ನಿಮಗೆ ದುಬಾರಿಯಾಗಿ ಪೋಷ್ಟು ಖರ್ಚುಗಳನ್ನು ವೃಥಾ ನೀವು ಕೊಡಬೇಕಾಗುತ್ತದೆ. ನಾವು ದಯವಿಟ್ಟು, ಮನಿ ಆರ್ಡರದ ಮೇಲೆ ವಾರ್ಷಿಕ ಚಂದಾ ಹಣ 3—0—0 ಕಳುಹಿಸಿ, ಬಳ್ಳಾರಿ ಜಿಲ್ಲೆಯಲ್ಲಿ ಒಂದೇ ಒಂದಾದ ಈ ಪತ್ರವನ್ನು ಅನುಗ್ರಹಿಸುವರೆಂದು ನಂಬಿರುತ್ತೇವೆ.

ವ್ಯವಸ್ಥಾಪಕರು— **ಕರ್ನಾಟಕ ಕೇಸರಿ.**

ಹೊಸವರ್ಷ

ಕ್ರೈಸ್ತ ಮತಾವಲಂಬಿಗಳ ಹೊಸ ವರ್ಷವು ಜನವರಿ 1 ನೇ ತಾರೀಖಿನಿಂದ ಪ್ರಾರಂಭವಾಯಿತು. ಹಿಂದೂ ಸ್ಥಾನದಲ್ಲಿ ಸಾಧಾರಣವಾಗಿ, ವಿದ್ಯಾವಂತರೆಲ್ಲಾ, ಇಂಗ್ಲೀಷ್ ತಿಂಗಳುಗಳನ್ನೇ ಗಣನೆಯಲ್ಲಿಟ್ಟಿರುವರು. ಕೋರ್ಟು, ಕಛೇರಿ, ಮತ್ತು ಇತರ ಸಾರ್ವಜನಿಕ ವ್ಯವಹಾರಗಳೆಲ್ಲವೂ, ಇಂಗ್ಲೀಷ್ ಕಾಲಸಿಯ ಮತ್ತೆ ಪ್ರಾಮುಖ್ಯತೆಯನ್ನು ಕೊಟ್ಟಿವೆ ಇತರ ಮತಾವಲಂಬಿಗಳು ಇದನ್ನು ಹಬ್ಬವಾಗಿಸಿವುದಿಲ್ಲ ಇವ್ಹೇ ವ್ಯತ್ಯಾಸ.

ವೃಧಾನ ಮಂತ್ರಿಗಳಾದ ರಾ. ಮ್ಯಾಕ್ಡೊನಾಲ್ಡ್ ರವರು ಹೇಳಿದಂತೆ ಹೋದ ವರ್ಷ, ಇಡೀ ಪ್ರಪಂಚವೇ

— — — — ಆರ್ಥಿಕ ಸಂಕಟಕ್ಕೊಳಗಾಗಿತ್ತು, ಒಗಕ್ಕಿನ ಇತರ ಭಾಗಗಳು ತಮ್ಮ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲು, ಸಾಕಾದಷ್ಟು ಉಪಾಯಗಳನ್ನು ಮಾಡಿಕೊಂಡರು. ಅಮೇರಿಕಾ ದೇಶದ ಪ್ರಜಾಪ್ರಭುತ್ವದ ಅಧ್ಯಕ್ಷರಾದ ಹೂವರ್ ರವರು ತಮ್ಮ ಸರ್ಕಾರಕ್ಕೆ ಬರಬೇಕಾದ, ಇತರ ರಾಷ್ಟ್ರಗಳವರು ಯುದ್ಧ ಕಾಲದಲ್ಲಿ ತೆಗೆದುಕೊಂಡಿದ್ದ ಸಾಲವನ್ನು ಕೊಡಲು ಒಂದು ವರ್ಷ ಅವಧಿಯನ್ನು ಕೊಟ್ಟರು. ಇದರಿಂದ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳಿಗೆ ಮಹೋಪಕಾರವಾಯಿತು ಇಂಗ್ಲೆಂಡ್ ದೇಶದಲ್ಲಿ ಪಕ್ಕಾ ಬ್ರಿಟಿಶ ವಸ್ತುಗಳನ್ನೇ ಉಪಯೋಗಿಸಬೇಕೆಂಬ ಚಳವಳಿಯನ್ನು ಪ್ರಿನ್ಸ್ ಆಫ್ ವೇಲ್ಸರವರೇ ಹೂಡಿದರು. ಸ್ವತಃ ಜಾರ್ಜ್ ಪಾರ್ಮ ಭೂಮರೇ ಉದಾಹರಣೆಯಾಗಿ, ಬ್ರಿಟಿಶ ಬಟ್ಟೆಗಳನ್ನು ಕೊಳ್ಳುತ್ತಿರುವರು.

ಹಿಂದುಸ್ಥಾನದ ಪರಿಸ್ಥಿತಿಗಳು ದುಃಖರೀತಿಯಲ್ಲಿ ಪರಿಣಮಿಸುತ್ತಿರುತ್ತವೆ ಆರ್ಥಿಕ ಕಷ್ಟ ನಿವಾರಣೆಗೆ ದೇವರು ಸಹಾಯಮಾಡಲಿಲ್ಲ. ಸರ್ಕಾರದವರೂ ಸಹಾಯ ಮಾಡಲಿಲ್ಲ ಹಿಂದೂ ದೇಶದ ಅನೇಕ ಪ್ರಾಂತಗಳಲ್ಲಿ ರೈತರು ಕಂದಾಯ ಕೊಡಲಿಕ್ಕೆ ಅಶಕ್ತರಿದ್ದಾರೆ. ವಿದ್ಯೆಯೊಂದಿದ ಅನೇಕ ಯುವಕರು ಯಾವ ಉದ್ಯೋಗಗಳೂ ಇಲ್ಲದೆ, ನಿರಾಶೆ ಪ್ರಪಂಚದಲ್ಲಿ

ಕಾಂಗ್ರೆಸ್ ಕಾರ್ಯಕಾರೀ ಮಂಡಲದ ಠರಾವುಗಳು.

ಸತ್ಯಾಗ್ರಹ ಸೂಚನೆ

(ಮಹಾತ್ಮ ಗಾಂಧಿಯವರು ವೈಸ್ರಾಯರನ್ನು ಕಾಣಲು ತಾರು ಮೂಲಕ ಕೇಳಿಕೊಂಡದ್ದಕ್ಕೆ, ಅವರಿಗೂ, ಕಾರ್ಯಕಾರೀ ಮಂಡಲಿಯವರಿಗೂ, ಅತೃಪ್ತಿಕರವಾದ ಜವಾಬ್ದು ಬಂದದ್ದರಿಂದ, ವಿಧಿಯಿಲ್ಲದೆ, ಅವರು, ಸತ್ಯಾಗ್ರಹದ ಏರ್ಪಾಟು ಮಾಡಿರುವರು. ಆದರೆ, ಮಹಾತ್ಮ ಗಾಂಧಿಯವರು ತಾವು ಬರೆದಿರುವ ಪತ್ರಕ್ಕೆ ಮತ್ತೊಂದು ಜವಾಬ್ ಬರುವ ವರೆಗೂ, ಯಾವ ತೀಕ್ಷ್ಣಕ್ರಮವೂ ಆರಂಭಿಸಲ್ಪಡಲಿಕ್ಕಿಲ್ಲ. ಕೆಲವು ದಿನಸಗಳಲ್ಲಿ ಇಡೀದೇಶದಲ್ಲೇ ಭಯಂಕರ ಚಳವಳಿಯೊಗುವ ಸೂಚನೆಗಳು ತೋರಿಬರುತ್ತಲಿವೆ.)

ಜನವರಿ 1 ಬೋಂಬಾಯಿ

ಈ ದಿವಸ ಬೆಳಿಗಿನ ಜಾವ 1 ಘಂಟೆಯವರೆಗೂ ಕಾರ್ಯಕಾರಿ ಮಂಡಲದಲ್ಲಿ ನೀರ್ಧಿ ಚರ್ಚೆಯು ನಡೆದು, ವೈಸ್ರಾಯರಿಂದ ಅನ್ಯೂಲವಾದ ಉತ್ತರವೆ ಬರದಿದ್ದರೆ, ಸತ್ಯಾಗ್ರಹದ ನಿರ್ಣಯವಾಗಬೇಕೆಂದು ಠರಾವಾಯಿತು.

ಕಾರ್ಯಕಾರೀ ಮಂಡಲವು ಮಹಾತ್ಮಗಾಂಧಿಯವರ ಯೂರೋಪ್ ಯಾತ್ರೆಯ ವಿಷಯವನ್ನೂ, ವಾಯುವ್ಯ ಪ್ರಾಂತ, ಗಡಿನಾಡು, ಬಂಗಾಳದ ಆರ್ಡಿನೆನ್ಸುಗಳನ್ನು ಪರಿಶೀಲಿಸಿರುವುದಲ್ಲದೆ ಸರಹದ್ದಿನಲ್ಲಿ ನಡೆದ ಗುಂಡುಗಾಲಿದಾಳ ಕೊಲೆಯನ್ನೂ, ಪಂಡಿತ ಜವಾಹರಲಾಲ, ಶಬ್ಬಾನಿ ಯವರ ವಸ್ತುಗಿರಿಗಳನ್ನೂ, ನಿಷರ್ಶಿಸಿದೆ.

ಮಹಾತ್ಮಗಾಂಧಿಯವರ ತಾರಿಗೆ ಪ್ರತ್ಯುತ್ತರವಾಗಿ, ವೈಸ್ರಾಯರು ಕಳುಹಿಸಿರುವ ತಂತಿಯನ್ನು ಕೂಡ ಕಾರ್ಯಕಾರಿ ಮಂಡಲಿಯು ಉಪ್ಪಿಸಿರುವುದು

ಈ ಎಲ್ಲಾ ಕೃತ್ಯಗಳಿಂದ ಸರ್ಕಾರದವರಿಗೆ ಅಧಿಕಾರಗಳನ್ನು ಬಿಟ್ಟುಕೊಡುವ ಇಷ್ಟವಿಲ್ಲವೆಂತಲೂ, ಕಾಂಗ್ರೆಸ್ ಸಹಾಯವು ಬೇಕಿಲ್ಲವೆಂತಲೂ, ಕಾರ್ಯಕಾರೀ ಮಂಡಲಿಗೆ ಸ್ಪಷ್ಟವಾಗಿದೆ.

ಕಾರ್ಯಕಾರೀ ಮಂಡಲಿಯು ಹಿಂಸೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಪೂರ್ಣ ಸ್ವರಾಜ್ಯ ಸಾಧನೆಗೆ ಕಾಂಗ್ರೆಸ್ ಅಹಿಂಸಾ ತತ್ವದಿಂದ ಬದ್ಧವಾಗಿರುವ ಈ ಕಾಲದಲ್ಲಿ ಇಡೀ ದೇಶಕ್ಕೆಲ್ಲಾ ಕಳಂಕರೂಪವಾದ, ಕೋಮಿನಲಾದ ಇಬ್ಬರು ಹುಡುಗಿಯರ ಕೊಲೆಯನ್ನು ಪೂರ್ಣವಾಗಿ ನಿಷೇಧಿಸುವುದು. ಅಂಥಾ ಕೃತ್ಯಗಳು, ದೇಶಕ್ಕೆ ದೊಡ್ಡ ಕೆಡುಕನ್ನು ತಂದವೆಂದು ಇದರ ಅಭಿಪ್ರಾಯ ವಿದೆ.

ವಿನಯ ತೋಚದೆ ತಿಮಗುತ್ತಲಿರುವರು ವ್ಯಾಪಾರವೂ, ಸಾಕಾದಷ್ಟು ಸರಧಾರಿಸಿಲ್ಲ ಪೋಷ್ಟು ದರಗಳನ್ನು ಹೆಚ್ಚಿಸಿರುವುದೂ, ಹೊಸ ಆದಾಯ ತೆರಿಗೆ ಹಾಕಿರುವುದೂ ಭಂಗಾರದ ಕಾನೂನು (ಸೊಲ್ಡ ಸ್ಟಾಂಡರ್ಡ್) ತೆಗೆಸಿ ಹಾಕಿರುವುದು, ಈ ಸಮಯ ಕಾಂದಕ್ಕೆ ಉಗ್ರ ಸ್ವರೂಪವನ್ನು ಕೊಟ್ಟಿವೆ.

ಇಷ್ಟೆ ಅಲ್ಲದೆ ಶಾಂತಿವಂತರಾಗಿದ್ದ ಮಹಾತ್ಮ ಗಾಂಧಿಯವರು, ವೈಸ್ರಾಯರಿಂದ ಅತೃಪ್ತಿಕರವಾದ ಜವಾಬನ್ನು ಹೊಂದಿ ಚಳವಳಿವನ್ನು ಪ್ರಾರಂಭಮಾಡುವಂತೆ ತೋರುತ್ತದೆ.

ಇದನ್ನೆಲ್ಲಾ ನೋಡಿದರೆ, ಹೊಸ ವರ್ಷವು ಹಿಂದೂಸ್ಥಾನಕ್ಕೆ, ಆಪ್ಪೇಸಿಯಸ ಪ್ರದವಾಗಿರಲಿಕ್ಕಿಲ್ಲವೆಂದು ಭಾಸವಾಗುತ್ತಲಿದೆ. ನಾವು ಈ ಎಲ್ಲಾ ಸಂಕಟಗಳಿಂದ ಎಂದು ಪಾರಾಗುವೆವೋ ಊಹಿಸಲಿಕ್ಕೂ ಅಸಾಧ್ಯವಾಗಿದೆ.

ಈ ಎಲ್ಲಾ ಸಂಕಟಗಳನ್ನೂ ಧೈರ್ಯ ಸ್ಥೈರ್ಯಗಳಿಂದ, ಸಹಿಸಲು ನಮಗೆ ತಕ್ಕ ಶಕ್ತಿ ಸಾಮರ್ಥ್ಯಗಳನ್ನು ಕೊಡಲೆಂದು, ಈ ಕ್ರೈಸ್ತ ಸರ್ವಾಂತರ್ಯಾಮಿಯಲ್ಲಿ ಭಗವಂತನನ್ನು ಪ್ರಾರ್ಥಿಸೋಣ.

ಆದರೆ ಕೆಲವರ ತಪ್ಪಿನಿಂದಾಗಿ ಇಡೀ ದೇಶವನ್ನೇ ಶಿಕ್ಷಿಸಲು ಸಾಕಾದಷ್ಟು ಬಲಾಢ್ಯವಾದ ವಿಶೇಷಕಾಯಿದೆಯು ಅನ್ಯಾಯವೆಂದು ಇದಕ್ಕೆ ಅಭಿಪ್ರಾಯವಿದೆ ಸಂಯುಕ್ತ ಪ್ರಾಂತ ವಾಯುವ್ಯ ಪ್ರಾಂತಗಳ ವಿಶೇಷಕಾಯಿದೆಗಳೂ, ಅನ್ಯಾಯವಾದವೇ ?

ಕೆಲವು ಮುಖ್ಯವಿಷಯಗಳಬಗ್ಗೆ ಮ. ಗಾಂಧಿಯವರೊಡನೆ ಆಲೋಚಿಸಲು ಬಯಸಿದ್ದ, ಪಂಡಿತ ಜವಾಹರಲಾಲ ನೆಹರೂ, ಶಿರ್ವಾನಿ, ಖಾನಅಬ್ದುಲ್‌ಗಫಾರ್‌ಖಾರ ದಸ್ತಗಿರಿಯು ಕಾಯಿದೇ ವಿಧಿವ್ಯವಹಾರದ ಮೇಲೇ ವ್ಯಕ್ತವಾಗಿ ಪಂಡಿತೆ

ಆರ್ಡಿನೆನ್ಸುಗಳನ್ನು ಮಾಡಲು ಯಾವ ಪರಿಸ್ಥಿತಿಯುಂಟಾಯಿತೆಂಬ ಬಗ್ಗೆ ನ್ಯಾಯವಾದ, ಸಾರ್ವಜನಿಕ ವಿಚಾರಣೆಯನ್ನೇರ್ಪಡಿಸಲು, ಕಾರ್ಯಕಾರೀಮಂಡಲವು ಸರ್ಕಾರಕ್ಕೆ ಸೂಚಿಸಿತ್ತು ಇಂಥಾ ವಿಚಾರಣೆಯು ನಿರ್ಣಾಟಾದರೆ, ಕಾರ್ಯಕಾರಿಣಿ ಮಂಡಲವು ಸಾಕ್ಷ್ಯವನ್ನೊದಗಿಸಲು ಸಹಾಯ ನೀಡುವುದು.

ಪ್ರಧಾನಮಂತ್ರಿಗಳ ಸ್ಪಷ್ಟನೆಯು ಅತೃಪ್ತಿಕರವಾದ್ದೆಂದು ಮಂಡಲದ ಅಭಿಪ್ರಾಯವಿದೆ. ಕಾಂಗ್ರೆಸ್ ಧ್ಯೇಯಗಳು ಪೂರ್ಣವಾಗಲು, ಅವರ ಪ್ರಕಟನೆಯು ವಿಷಯಗಳು ಕಡಿಮೆ ಬೀಳುತ್ತವೆ.

ಮಂಡಲಿಯು ಹಿಂದೂ ಐಕಮತ್ಯಕ್ಕೆ ಹೆಣಗಾಡುವುದು

ಸತ್ಯಾಗ್ರಹ ಕ್ರಮ.

ಸರ್ಕಾರದಿಂದ ಸಾಕಾದಷ್ಟು ಅನುಕೂಲವಾದ ಜವಾಬ್ ದೊರೆಯದಿದ್ದರೆ, ದೇಶದಲ್ಲೆಲ್ಲಾ ಈ ಕೆಳಗೆ ಕಾಣಿಸಿದಪ್ರಕಾರ, ಕಾಯಿದೇಭಂಗವನ್ನಾರಂಭಿಸಲು ಕಾರ್ಯಕಾರೀಮಂಡಲವು ಸೂಚಿಸುವುದು.

(1) ಪ್ರಾಣ, ಆಸ್ತಿಪಾಸ್ತಿಗಳಿಗೆ ಲಕ್ಷ್ಯಮಾಡದಿರುವ, ಅಹಿಂಸಾತತ್ವವನ್ನು ಚೆನ್ನಾಗಿ ಆರಿತು ಎಂಥಾ ಕಷ್ಟಗಳನ್ನಾದರೂ ಲೆಕ್ಕಿಸದಿರುವ, ಯಾವಪ್ರಾಂತ, ಜಿಲ್ಲಾ, ತಹಶೀಲು, ಹಳ್ಳಿಯವರಾದರೂ ಸತ್ಯಾಗ್ರಹವನ್ನಾರಂಭಿಸಬಹುದು

(2) **ಎಂಥಾ ವಿರೋಧ ಪರಿಸ್ಥಿತಿಯೊದಗಲಿ, ಅಹಿಂಸಾತತ್ವವು ಆಲೋಚನೆ ಯಲ್ಲಿಯೂ, ಮಾತಿನಲ್ಲಿಯೂ, ಕಾರ್ಯದಲ್ಲಿಯೂ, ಅನುಸರಿಸಲ್ಪಡಬೇಕು.**

ನಮ್ಮ ಎದುರಾಳಿಯ ಮೇಲೆ ಪ್ರತೀಕಾರವಾಗಲೀ, ತೊಂದರೆಯಾಗಲೀ, ಕೊಡುವ ಉದ್ದೇಶದಿಂದ, ಈ ಚಳವಳಿ ಹೂಡಿದೆ, ನಮ್ಮ ಕಷ್ಟಾನುಭವದಿಂದಲೂ, ಸ್ವಯಂಬುದ್ಧಿಯಿಂದಲೂ ನಾವು ಶತ್ರುವಿನ ಮನಸ್ಸನ್ನು ತಿರುಗಿಸಬೇಕಾಗಿದೆ ಯೆಂದು ತಿಳಿಯಬೇಕು.

(3) ಸರ್ಕಾರದ ಅಧಿಕಾರಿಗಳು, ಪೋಲೀಸಿನವರು, ನಮ್ಮತತ್ವವಿರೋಧಿಗಳೂ ಪರ್ಸನಲ್ ಕೆಲವರಿಗೆ ತೊಂದರೆಕೊಡುವ ಉದ್ದೇಶದಿಂದ ಸಾಂಘಿಕ ಬಹಿಷ್ಕಾರವನ್ನು ಹೂಡಬಾರದು. ಇದು ತತ್ವವಿರುದ್ಧವಾಗಿದೆ.

(೫ನೇ ಪುಟದಲ್ಲಿ ಮುಂದುವರಿದಿದೆ)

ಸತ್ಯಾಗ್ರಹ ವಾರ್ತೆಗಳು.

ಪಿಷಾವರ್ ಪ್ರಾಂತದಲ್ಲಿ ಸರ್ಕಾರವನರ ಸ್ವಕಟ ನೆಯ ಪ್ರಕಾರ 1183 ದಸ್ತಗಿರಿಗಳಾಗಿವೆ. ಕಟಕ್ ಬಿ ಲ್ಲಾದಲ್ಲಿ ಇನ್ನೂ ಅಶಾಂತಿ ಇರುವುದಂತೆ. ಅಲಹಾಬಾ ದಿನಲ್ಲಿ ವಿಶೇಷ ಕಾಯಿದೆಯ ಮೇಲೆ ಸುಮಾರು 80 ಜ ನರನ್ನು ಈ ವರಿವಿಗೂ ಕೈ ಸರೆಯಲ್ಲಿಟ್ಟಿರುವರ, ಪಂಡಿ ತ ಜವಾಹರಲಾಲ ನೆಹರೂ ಯವರನ್ನು ಜನವರಿ 4 ನೇ ತಾರೀಖಿಗೆ ವಿಚಾರಣೆ ಮಾಡುವರು.

ವಾಯುವ್ಯ ಪ್ರಾಂತದ ಕೋಹೆತ್ ಪಟ್ಟಣದಲ್ಲಿ ಡಿಸಂಬರ್ 26 ನೇ ತಾರೀಖಿನ ದಿವಸ 120 ಜನರನ್ನು ಹಿಡಿದಿರುವರು. ಬುನ್ನ ಪಿಟಿಯಲ್ಲಿ 32 ಕೆಂಪಂಗಿಯವರ ನ್ನು ಹಿಡಿದಿರುವರು.

ಗಡಿನಾಡಿನ ಗಾಂಧಿಯವರೆಂದು ಪ್ರಸಿದ್ಧರಾದ ಅಬ್ದುಲ್ ಗಫರ್ ಖಾ ರವರು ಬರ್ಮಾದಲ್ಲಿ ಬಂಧಿಸಲ್ಪಡುವರೆಂದು ಪಟ್ಟಣಾತೆ ಇದೆ

ಗೋಂಡ ಪಿಲ್ಲಿಯಲ್ಲಿ 107—108 ನೇ ಕಲಂಗಳ ಪ್ರ ಕಾರ ಇಬ್ಬರನ್ನು ಬಂಧಿಸಿರವರು ಸುತ್ತು ನಾಕ್ಕಿರಿಗೆ 144 ನೇ ಕಲಂದ ಪ್ರಕಾರ ನೋಟೀಸು ಕೊಟ್ಟಿರುವರು.

ಕರ್ನಾಟಕ

ಬಳ್ಳಾರಿ

ಮೈಸೂರು ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸಿದ್ಧೇಶ್ವರಾನಂದರವರು, ಈ ಊರಿನ ಮುನಿಸಿಪಲ್ ಹೈಸ್ಕೂಲಿದಲ್ಲಿ, ಕರ್ಮಯೋಗ, ಜ್ಞಾನಯೋಗ, ಜೀ ವಾತ್ಮರಸಂಬಂಧ ಈ ವಿಷಯಗಳಲ್ಲಿ, ಮೂರು ಉಪ ನ್ಯಾಸಗಳನ್ನು ಕೊಟ್ಟರು. ಶೈಲಿಯು ಗಂಭೀರವಾಗಿ ಯೂ, ವಿಚಾರಗಳು ಉದಾತ್ತವಾಗಿಯೂ ಇದ್ದು, ವಿ ದ್ಯಾವಂತರಲ್ಲಿ ವೇದಾಂತ ವಿಚಾರಗಳಮೇಲೆ ಗೌರವವು ಉತ್ಪನ್ನ ವಾಯಿತು.

ಪನ್ನಾ ರಾಜರ ನಿಧನ

ಸುಮಾರು ಇಪ್ಪತ್ತೈದು ವರ್ಷಗಳ ಮೇಲಿಂದ ೯ ಈ ಊರಿನಲ್ಲಿ ಬಂಧಿತರಾಗಿ ರಾಜಕೀಯ ವೇತನ ವನ್ನು ಹೊಂದುತ್ತಲಿದ್ದ ಪನ್ನಾ ಮಹರಾಜರು, ಕೆಲವು ತಿಂಗಳೆಂದಲೂ ಅಸ್ವಸ್ಥರಾಗಿದ್ದು, ಬ ಧವಾರ(30-12-31) ನೇ ಪ್ರಾತಃಕಾಲ 3 ಘಂಟೆಗೆ ಸ್ವರ್ಗಸ್ಥರಾ ದರು. ಇವರು ಅತ್ಯಂತಜನಾನುರಾಗಿಗಳಾಗಿ, ಬ್ರಾಹ್ಮ ಣರಿಗೂ, ಧರ್ಮಾರ್ಥಿಗೂ ವಿಶೇಷ ದಾನವತ್ಸಲರಾಗಿದ್ದರು. ಇವರು ತಮ್ಮ ಜೀವಿತಕಾಲದಲ್ಲಿ ಸಾವಿ ರಾರು ರೈಪ್ಯಮೃಗಗಳನ್ನು ಕೊಂದು ಹೆಸರುವಾಸಿ ಪಡೆ ದಿದ್ದರು. ಇವರಿಗೆ ಸಾಯುವಾಗ ಸುಮಾರು 60 ವರ್ಷ ವಿರಬಹುದು.

ಕೊಟ್ಟೂರು

(ಸ್ವಂತ ಸುದ್ದಿಗಾರರಿಂದ)

ಬಳ್ಳಾರಿಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳು ದ ತ್ತಿ ಸುಬ್ರಹ್ಮಣ್ಯಂ ರವರು ಇಲ್ಲಿಗೆ ದಯಮಾಡಿಸಿ, 28-12-31 ರ ದಿವಸ ಸಾರ್ವಜನಿಕ ಸಭೆಯಲ್ಲಿ ಹಿಂ ದೂಸ್ಥಾನಕ್ಕೆ ಮಹಾತ್ಮರನ್ನು ಸ್ವಾಗತಿಸುವುದು, ಪಂ ಡಿತ ಜವಾಹರಲಾಲ್, ಶೌಕತಾಲಿಯವರನ್ನು ಹಿಡಿದಬಗ್ಗೆ ನಿಷೇಧ, ಪದ್ಯದರಾಜಕೀಯ ಪರಿಸ್ಥಿತಿಗಳಮೇಲೆ ಉಪ ನ್ಯಾಸ ಮಾಡಿದರು

ಶ್ರೀಮತಿ ಯಡುಗಿರಿಯಮ್ಮಾರಿಯರ ತೀರ್ಥಸೆಯು ತಾ॥ 30-12-31 ಕ್ಕೆ ಇಟ್ಟಿದ್ದರು. ರೇಣುಕಾಚಾರ್ಯ ರ ಕಥೆ ಆಯಿತು. ಒನರೆಲ್ಲರೂ ಪ್ರೋತ್ಸಾಹಿಸಿ, ಈ ಮೂಲಕ ಧನಸಹಾಯ ಮಾಡಿಸಿದ್ದರಿಂದ, ಕೃತಜ್ಞತೆಗೆ ಪಾತ್ರರು.

ಕಾರ್ವಾರ.

ಆರನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಕಾರ್ವಾರದಲ್ಲಿ ಕೂಡಿ ಅನೇಕ ಉಪ ಸಭೆಗಳು, ಪ್ರಸಿದ್ಧ ವಿದ್ವಾನರ ಅಧ್ಯಕ್ಷತೆಗಳಲ್ಲಿ ಕೂಡುತ್ತಲಿವೆ ಕರ್ನಾಟಕ ವಿಕೀಕರಣ ಸಭೆಯು ಸಾ. ಜಿ. ಎ ಸಾಲ್ವಿನ್ ರನರ ಅಧ್ಯಕ್ಷತೆಯಲ್ಲಿ ಕೂಡಿ ಮುಖ್ಯವು ರಾಷ್ಟ್ರಗಳು ಪಾ ಸಾದವು

ಮೈಸೂರು ಸಂಸ್ಥಾನದ ಸೈನ್ಯದ ಬಗ್ಗೆ ಈ ನ ರ್ಷ ಗಿಲಿತರ್ತಿಗಳ ಪೂರ್ಣಾಯಿಗಳು ನೆಚ್ಚಾಗಿರುವುದಕ್ಕೆ ಸೈನ್ಯದಲ್ಲಿ ೯೯೩ ಒಬ್ಬ ಮಹಾರಾಜನು, ಒಬ್ಬ ಮಾರಿ ಪಾಂ ಜನ ಕ್ರೈಸ್ತ ತಿಂಗ ರುಪೂತ ಮತ್ತು ಭ್ರಾಹ್ಮಣರು, ೯ ಜನ ಕ್ಷತ್ರಿಯ ಲಿಂಗ ಇತರ ಮತಸ್ಥರು ೩೫ ಜನ ಗೆಜೆಟಿಗಳು ಇದ್ದಾರೆ.

ಬಿಂಬೂಸ್ಥಾನ.

ಪಂಡಿತ ಮದನಮೋಹನ ಮಾಳವೀಯರು 70 ನೇ ವರ್ಷದ ವರ್ಧಂತ್ಯುತ್ಸವವನ್ನು ನೆರವೇರಿಸಲು ಜ ನವರಿ ಬೆವಾರಿಸಿ ಸಲ್ಲಿಲ್ಲವಾದುದರಿಂದ ಆ ಸಮಾರಂ ಭವನ್ನು ಮುಂದುವರಿಸುವರು ಶ್ರೀ. ಪಂಡಿತರ ಶೈ ಯಪ್ರಾರ್ಥನಾರೂಪಕವಾಗಿ ಮಹಾತ್ಮರು, ಶಾ ರ ವೀಂದ್ರನಾಥಠಾಗೂರರವರೂ, ಸರ್ ಬಿ ಸಿ ಬೋಸ ರವರೂ, ಸರ್ ಸಿ ವಿ ರಾಮನ್‌ರವರೂ, ಸರ್ ಎಸ್. ರಾಧಾಕೃಷ್ಣನ್‌ರವರೂ, ಸರ್ ವಿ ಟಿ ಚಿಪ್ಲಾಲ್‌ರವ ರೂ, ಮತ್ತು ಸರ್ ಎಂ ವಿಶ್ವೇಶ್ವರಯ್ಯನವರೂ ಪತ್ರ ಗಳನ್ನು ಬರೆದಿರುವರು

ಆಗ್ರಾದಲ್ಲಿ "ಸೈನಿಕ" ಎಂಬ ವಾರಪತ್ರಿಕೆಯ ಸಂಪಾದಕರಾದ ಮಿ॥ ವೇಣೀಂದ್ರಕರ್ಮ ಎಂಬುವರು ಇ ಪಿ. 124 ನೇ ಕಲಂ ದ ಪ್ರಕಾರ ಹಿಡಿಯಲ್ಪಟ್ಟಿ ರುವರು ಅವರ ಪ್ರೆಸ್ಸಿನಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರ ಆಜ್ಞೆ ಯಾಗುವವರೆಗೂ, ಏನೂಪ್ರಕಟಿಸಬಾರದೆಂದು ಆಜ್ಞೆ ಯಾಗಿದೆ.

ಕಾಶ್ಮೀರದೇಶಕ್ಕೆ ಹೊರಟಿದ್ದ 13 ಜನ ಮುಸ ಲ್ಮಾ ಸ್ವಯಂಸೇವಕರು, ಜನವರೀ 1 ನೇ ತಾರೀಖಿ ನ ದಿವಸ ಹಿಡಿಯಲ್ಪಟ್ಟಿರುವರು

ಬೊಂಬಾಯಿಯಿಂದ ಮಹಾತ್ಮ ಗಾಂಧಿಯವರು ಸರ್. ತೇಜಬಹದ್ದೂರು ಸಪ್ರುರವರಿಗೆ ಸಧ್ಯದ ರಾ ಜಕೀಯ ಪರಿಸ್ಥಿತಿಯ ವಿಷಯದಲ್ಲಿ ತಮ್ಮ ಅಭಿಪ್ರಾ ಯಗಳನ್ನು ತೀಸಲು ತಾರುಮೂಲಕ ಕೋರಿದ್ದಾರೆ.

ಆಂಧ್ರದೇಶದ ಒಬ್ಬ ಹಿಂದೂ ಯೋಗಿಗಳಾದ ಸ್ವಾಮಿ ನರಸಿಂಹ ಎಂಬುವರು, ಎಂಥಾ ವಿಷಗಳ ನ್ನೇ ಆಗಲೀ ರಸಾಯನ ಪದಾರ್ಥಗಳನ್ನಾಗಲೀ ಕು ಡಿದ. ಬಿಡುವರು. ತೀಕ್ಷ್ಣವಾದ ಗಾಜಿನ ಚೂರುಗಳನ್ನು ಅಗಿದು ತಿಂದುನಿಡುವರು. ಕಾಸ್ಟ್ಯರೆಸ್ಟ್ರೋಮಂಬಿ ಅವರನ್ನು ಪರೀಕ್ಷಿಸಿ, ಆಶ್ಚರ್ಯ ಹೊಂದಿರುವರು.

ಪಂಜಾಬ ಮತ್ತು ಯ ಏ ಕಾಂಗ್ರೆಸ್ ಸಭೆ ಯವರು ಪೂರಿಯಲ್ಲಿ ಮುಂದೆ ನಡೆಯ ಲಿಕ್ಕಿರುವ ಅಖಿ ಲಭಾರತ ರಾಷ್ಟ್ರೀಯ ಸಮಾವೇಶಕ್ಕೆ, ಶ್ರೀ. ಪುರುಷೋ ತ್ತಮದಾಸ ಟಂಡನರವರನ್ನೇ ಅಧ್ಯಕ್ಷರನ್ನಾಗಿ ಚುನಾವಣೆ ಮಾಡಿರುವರು.

ಬಡವರ ಭಾಗ್ಯ ಅರ್ಥಾತ್ ರಾಮ.

ಲೇಖಕರು— ಶ್ರೀ ರಾ ನೆ ಎಜವಿ. ಹುಬ್ಬಿ

ಹಿಂದೂಸ್ಥಾನದ ದಾರಿದ್ರ್ಯವನ್ನು ನಿರ್ಮೂಲ ಮಾ ಡಲು ಮಹಾತ್ಮ ಗಾಂಧಿಯವರು ಖಾದಿಯ ಪ್ರಸಾರವ ನ್ನು ಕೈ ಗೊಂಡು ಅವರ ಪ್ರಭಾವದಿಂದ ಇತೀ ಹಿಂ ದೂ ದೇಶದಲ್ಲಿ ಖಾದಿಯ ಉತ್ಪನ್ನಕ್ಕೆ ಪ್ರಾರಂಭವಾಗಿ ಖಾದಿಯನ್ನು ಪಾಸ್ಯ ಮಾಡುತ್ತಿದ್ದವೆಪರ ಕಣ್ಣುಗಳು ತೆರೆಯುತ್ತಲಿವೆ.

ಮೇಲ್ಕಾಣಿಸಿದ ಚಿಕ್ಕ ಪುಸ್ತಕವು ರಾಟೆಯ ಮ ಹತ್ವ ಹಿಂದೂ ದೇಶವನ್ನೂಲುವ ಕಲೆಯು ಬಗ್ಗೆ ವೆ ಶೇಷ ಸೂಚಿಯನ್ನು ಕೊಡಿ ವೆಮ ಇವನ್ನು ಸರ್ವ ರೂ ಓದಿ ಉಪಯೋಗ ಪೊಂದಲೆಂದು ನಮ್ಮ ಆಶಯ.

ಸತ್ಯಾಗ್ರಹ ಕ್ರಮ.

(೪ ನೇ ಪುಟದಿಂದ ಮುಂದುವರಿದಿದೆ)

(4) ಅಹಿಂಸಾತತ್ವಳವಳಿಗೆ ಹಣದಿ ಸಹಾಯವು ಬೇ ಕಾಗಿಲ್ಲವಾದ್ದರಿಂದ, ದ ಡ್ಡು ಕೊಟ್ಟು ಸ್ವಯಂಸೇವಕರ ಸ್ಪೆಷಲ್ ಸಾಧ್ಯವಾದಷ್ಟು. ಬಡವರು ಜೈಲಿಗೆಹೋಗಿದ್ದಲ್ಲಿ, ಅವರ ಸಂಸಾರ ಪೋಷಣೆಯನ್ನು ಸಹಿಸಬಹುದು.

(5) ಪರದೇಶಿಬಟ್ಟೆ ಅಂದರೆ ಅದರಲ್ಲಿ ಇಂಗ್ಲೀಷ್ ಬಟ್ಟೆ ಯಾಗಲೀ, ಇತರ ಯಾವದೇಶದ್ದಾಗಲೀ, ವಿ ಲ್ಲಾ ಸಂಪರ್ಕಗಳಲ್ಲೂ ಬಹಿಷ್ಕರಿಸಲ್ಪಡಬೇಕು.

(6) ಕಾಂಗ್ರೆಸ್‌ಗೆ ಸಂಬಂಧಿಸಿದ ಪುರುಷರೂ, ಸ್ತ್ರೀ ಯರೂ ಮಿಲ್ಲಿನ ಬಟ್ಟೆಯನ್ನು ಕೊಡ ಬಿಟ್ಟು, ಕುದ್ದು ಕೈ ನೂಲು, ಕೈ ನುಗ್ಗಿದ ಬಟ್ಟೆಯನ್ನು ಧರಿಸಬೇಕು.

(7) ಸೇಂದಿ ಸರಾಯಿ, ಅಂಗಡಿಗಳೂ, ಪರದೇಶಿ ಬಟ್ಟೆಗಳಅಂಗಡಿಗಳೂ ಪೂರ್ಣಬಹಿಷ್ಕರಿಸಲ್ಪಡಬೇಕು. ಅಹಿಂಸಾತತ್ವವು ಜಯಶಾಲಿಯಾಗಲು ಮುಖ್ಯವಾಗಿ ಕಾಂಗರೇ ಈ ಕಾರ್ಯದಲ್ಲಿ ತೊಡಗಬೇಕು

(8) ಲೈಸನ್‌ಇಲ್ಲದ ಉಪ್ಪಿನ ಉತ್ಪತ್ತಿ, ಅರಿ ಸೋಣವು ಪ್ರಾರಂಭವಾಗಿದೆ.

(9) ಮೆರವಣಿಗೆಗಳೂ, ಸಮಾರಂಭಗಳೂ ಎರ್ವ ಟ್ಟಿರೆ ತಮ್ಮ ಸ್ವಳಗಳಂದೆ ಕಿವಲವೆ, ಲಾಠೀಛಾರ್ಜಿಗಳೆ, ಗುಂಡಿನೇಟುಗಳಿಗೂ ಹೆಸರಾದಿರುವ ಜಾಗಕೇ ಹೋಗ ಬೇಕು

(10) ಅಹಿಂಸಾತ್ಮಕ ಯುದ್ಧದಲ್ಲಿ ಬ್ರಿಟಿಶ ವಸ್ತು ಗಳ ಭಹಿಷ್ಕಾರವು ನ್ಯಾಯವಾದ್ದರಿಂದ, ಅವೆನ್ನು ಆಚ ರಿಸಬೇಕು

(11) ಅನ್ಯಾಯ ಕಾಯ್ದೆಗಳೆಲ್ಲವನ್ನೂ, ಧಿಕ್ಕಾರ ಮಾ ಡಬೇಕು

(12) ಆರ್ಡಿನೆನ್ಸ್ ಎಂಬ ವಿಶೇಷಕಾಯಿದೆಗಳ ಪ್ರ ಕಾರ ಜಾರಿಗೆ ಬರುವ ರೂಲುಗಳನ್ನೆಲ್ಲಾ ಧಿಕ್ಕರಿಸ ಬೇಕು

ಸಾದರ ಸ್ವೀಕಾರ.

ಶ್ರೀ ರಾಮಕೃಷ್ಣ ಚರಿತಾಮೃತವು.

ಉಪನಿಷತ್ ಪ್ರಕಾಶ, ಗೀತೆಯ.ಗ ಟ್ಟು, ಮತ್ತು ಉಪನಿಷತ್ತರಹಸ್ಯ ಎಂಬ ಶ್ರೇಷ್ಠ ಆಧ್ಯಾತ್ಮಿಕಗ್ರಂಥ ಗಳ ಲೇಖರಾದ ಶ್ರೀ. ರಂಗನಾಥಯಮಚಂದ್ರ ದಿವಾಳ ರವರು, ಈ ಗ್ರಂಥದ ಲೇಖಕರಾಗಿದ್ದು, ಕರ್ನಾಟಕಕ್ಕೆ ಅಪರಿಚಿತಸ್ಥರಲ್ಲ. ರಾಜಕೀಯ ಜೀವನ ದಲ್ಲೂ, ಸಾ ರ್ವಜನಿಕ ಜೀವನದಲ್ಲೂ, ಅವರು ಪ್ರಮುಖಸ್ಥಳವ ನ್ನಾಕ್ರಮಿಸಿರುವರು, ನುಡಿದಂತೆ ನಡೆ ಎಂಬ ತತ್ವವು ಅವರ ಜೀವನಪಥದಲ್ಲಿ ಕ್ರಮವಾಗಿ ಬಂದಿದೆ ಇಂಥಹವ ರು ತಮ್ಮ ಶುದ್ಧಭಾವನಾ ತರಂಗಗಳ ಪ್ರೇರೇಪಣೆ ಯಿಂದ ಆಧ್ಯಾತ್ಮಿಕಗ್ರಂಥಗಳನ್ನು ಬರೆಯಲು ಹೆಚ್ಚಿದ ರೆ, ಇಸೆ ಪೆಸಾಧನೆಯಾಗುವುದರಲ್ಲೇನಾಶ್ಚರ್ಯ. ಜ ನ್ಮವೆತ್ತಿದ ಪ್ರತಿಯೊಂಯೆ ವ್ಯಕ್ತಿಯೂ, ದೈವೀಸಂಬಂ ಧದ ನಿಷಯಗಳನ್ನು ಸ್ವಜನನಮಾಡಿ ಆಚರಣೆಗೆತಂದು ಉದಾಹರಣೆಯಾಗಿ ಪರಿಣಮಿಸಿದಲ್ಲಿ ॥ ಗೋಖಲೆಯ ವರ 'ಸಾರ್ವಜನಿಕ ಜೀವನವನ್ನು ಧರ್ಮಮಯವನ್ನಾಗಿ ಸಬೇಕು' ಎಂಬಹೇಳಿಕೆಯು ಎಷ್ಟು ಸಾರ್ಥಕವಾದೀತು!

ಸ್ವಾಮಿ ರಾಮಕೃಷ್ಣ ಪರಮ ಹಂಸರು ಬಂಗಾ ಳದಲ್ಲಿ ಜನಿಸಿದರು. ಅವರ ಶಿಷ್ಯ ತಿಲಾಮಣಿಗಳಾದ ಸ್ವಾ ಮಿ ವಿವೇಕಾನಂದರು ಪಾಶ್ಚಿಮಾತ್ಯ ದೇಶಗಳನ್ನೆಲ್ಲಾ ಹಿಂದೂ ಧರ್ಮದ ವಿಷಯದಲ್ಲಿ ಬೆರಗುಮಾಡಿದರು. ಪು ಸ್ತಕದಲ್ಲಿ ಈ ಅಮೂಲ್ಯ ವಿಷಯಗಳು ತೀರಾ ಸರಳ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಇದು ಪ್ರತಿಯೊಬ್ಬ ರ ನ್ನೂ ತಿಳಿಸಿಂದಲೂ, ಸಣಾಗ್ರಹ ಯೋಗ್ಯವಾಗಿದೆ. 250 ಪುಟಗಳ ಈ ಪುಸ್ತಕಕ್ಕೆ ಬೆಲೆಯನ್ನು 1—0—0ರೂ ಇಟ್ಟು ಮಹೋಪಕಾರ ಮಾಡಿದ್ದಾರೆ.

ಸಿಕ್ಕುವ ಸ್ಥಳ :-ಅಧ್ಯಾತ್ಮಕಾರ್ಯಾಲಯ ಧಾರ್ವಾಡ.

ನಿಜಾಂಪ್ರಾಂತದಲ್ಲಿ
ಶ್ರೀ. ಬೇಲೂರ ಕೇಶವದಾಸರು.

ಶ್ರೀ. ಬೇಲೂರ ಕೇಶವದಾಸರ ಹೆಸರು ಕೇಳದ ಕನ್ನಡಿಗ ನಿಲ್ಲ ವೆನ್ನಬಹುದು. ಕೀರ್ತನಕಾರರಲ್ಲಿ ಸಂಪ್ರ ಸಿದ್ಧ ಕೀರ್ತನಕಾರರಿವರು. ಕರ್ನಾಟಕದ ಒಂದುಜೋ ತೆ ಯಂದರು ತಪ್ಪಾಗಲಿಕ್ಕಿಲ್ಲ. ಇವರ ಕೀರ್ತನೆಯನ್ನು ಕೇಳದವನೇ ದುರ್ದೈವಿಯನ್ನಬಹುದು. ಎಲ್ಲ ಕೀರ್ತನೆ ಕಾರರಂತೆ ಇವರಲ್ಲಿ. ಇವರು ಮಾಡುವ ಕೀರ್ತನೆಗಳ ತಂಹವೇ ಬೇರೆಯಾಗಿದೆ. ಧರ್ಮದಲ್ಲೇನಿದೆ? ಹಿಂದಿನ ವರಿಗೇನು ತಿಳಿಯುತ್ತಿತ್ತು? ಎಂದು ಧರ್ಮವನ್ನು ಹಳ ಯವ, ಹಿರಿಯರನ್ನು ದೂರುವ, ತರುಣರನ್ನು ಬಡಿದೆ ಬ್ಬಿಸದಿರುವ ಇವರ ಕೀರ್ತನೆಗಳು ಇವರ ಕೀರ್ತನೆಗ ಳನ್ನು ಕೇಳದ ಕೂಡಲೇ ಎಂಥಾವನಿಗಾದರೂ ಧರ್ಮ ದಲ್ಲಿ ಆಸಕ್ತಿ ಹುಟ್ಟಲೇ ಬೇಕು. ನಮ್ಮ ಹಿರಿಯರು ಎಂ ತಹ ಪುಣ್ಯಶಾಲಿಗಳೂ, ಎಂತಹ ಅಪರೋಕ್ಷ ಜ್ಞಾನಿಗ ಳೂ, ಎಂತಹ ದೇಶಾಭಿಮಾನಿಗಳೂ, ಪರಮಾತ್ಮನ ಕೃ ಪೆಗೆ ಪಾತ್ರರಾದವರೂ, ಆಂಥವರ ಹೊಟ್ಟೆಯಲ್ಲಿ ಎಂಥ ವರು ಹುಟ್ಟಬೇಕೆಂದು ಕಣ್ಣೀರುದುರಿಸದಿರರು, ಇವರ ಕೀರ್ತನೆಯನ್ನು ಕೇಳಿದವರು. ಭಕ್ತಿರಸವಂತೂ ತುಂಬಿ ತುಳುಕುತ್ತಿರುತ್ತದೆ. ಸಾಹಿತ್ಯ ಪ್ರೇಮಿಗಳು ಇವರು ಹೇಳುವ ಹಾಡುಗಳಿಂದ ಮನದಣಿಯದಿರರು. ಇವರ ಕೀರ್ತನೆಗಳನ್ನು ಎಷ್ಟು ಹೊಗಳಿದರೂ ಕಡಿಮೆ ಯೆಂದು ನನಗೆ ಅನಿಸುತ್ತದೆ.

ಈಗಿನ ವಾತಾವರಣದಲ್ಲಿ ಇಂತ ಕೀರ್ತನಕಾರರೇ ಬೇಕಾಗಿದೆ ದಾಸರ ಪದಗಳಿಗೆ ಇವರು ಮಾಡುವ ಅ ರ್ಥವನ್ನು ಇದುವರೆಗೂ ಯಾವ ಕೀರ್ತನೆಕಾರರೂ ಮಾ ಡಿಲ್ಲವೆನ್ನಬಹುದು. ಪದಗಳ ಪೂರ್ಣತತ್ವವನ್ನರಿಯದೆ, ಬುದ್ಧಿಯನ್ನು ನಡಿಸದೆ ಮನಸ್ಸಿಗೆ ಬಂದಹಾಗೆ ಅರ್ಥ ಮಾಡಿ ಜನಾಂಗವನ್ನು ಹಾಳುಮಾಡುವ ಕೀರ್ತನಕಾ ರರೂ ಇದ್ದಾರೆ ಕೇವಲ ಅಕ್ಕಿಯ ಆಸೆಗಾಗಿಯೂ, ದುಡ್ಡಿನ ಆಸೆಗಾಗಿಯೂ, ತತ್ವಗಳಿಂದ ತುಂಬಿ ತುಳುಕುವ ಪುರಾಣಗಳ ಅರ್ಥವನ್ನು ಕೆಲ ಪುರಾಣಿಕ ರು, ಸವಿಗಳ, ಸುಳ್ಳಾದಿಗಳ, ಅರ್ಥ ತತ್ವವನ್ನು ಹಾಳು ಮಾಡಿ ಕೇವಲ ಶೃಂಗಾರ ರಸದಿಂದಲೇ ಶಬ್ದಬಾಹ್ಯಾ ರ್ಥ ಮೇಲಿಂದ ಅರ್ಥಮಾಡಿ ಹೇಳುವದರಿಂದಲೇ ಜನರ ಮನಸ್ಸು ಚಂಚಲವಾಗಿ ಧರ್ಮವು ಈ ಸ್ಥಿತಿಗೆ ಬಂ ದಿತೆಂದು, ನಿಶ್ಚಯಿಸಿಕೆಯಿಂದ ಹೇಳ ಬಹುದು. ಇಂಥವರ ಬೋಧನೆಯಿಂದ, ಜನರಲ್ಲಿ ಉಂಟಾದ ತಪ್ಪು ತಿಳುವಳಿ ಕೆಯನ್ನು ಹೋಗಲಾಡಿಸಿ ನಿಜವಾದ ತತ್ವವನ್ನು ತಲೆ ಯಲ್ಲಿ ತುಂಬಿ ಸಕಲರಲ್ಲಿ ಭಕ್ತಿರಸವನ್ನುಂಟು ಮಾಡು ವದೇ ಇವರ ಉದ್ದೇಶವೆಂತಲೂ, ಆದರಿಂದಲೇ ತ ಮ್ಮ ಒನ್ನ ಸಾರ್ಥಕವೆಂತಲೂ, ಆವರಾಡುವ ನುಡಿಗ ಳಿಂದಲೇ ತಿಳಿದು ಬರುತ್ತದೆ.

ಈ ಮಹನೀಯರು ಈಗ ನಮ್ಮ ನಿಜಾಂ ಕರ್ನಾ ಟಕವನ್ನು ಸಂಚರಿಸಲು ಬಂದಿರುವರು ಈ ಭಾಗದಲ್ಲಿ ಕೇವಲ ಕೀರ್ತನೆ ಮಾಡುವದೇ ಇವರ ಉದ್ದೇಶವಾಗಿ ಲ್ಲ. ಇದಕ್ಕಿ ಮಹತ್ವವಾದದ್ದೊಂದು ಉದ್ದೇಶದಿಂದ ಬಂದಿದುವರು. ಕರ್ನಾಟಕ ಭಕ್ತವಿಜಯ ವೆಂಬ ಪುಸ್ತ ಕ ಬರೆಯಬೇಕೆಂಬುದೇ ಇಲ್ಲಿಗೆ ಬರಲು ಮೂಲ ಕಾರ ಣ ನಮ್ಮ ಕರ್ನಾಟಕದಲ್ಲಿ ಆಗಿಹೋದ ದಾಸರ ಸಾ ಧು ಸಂತರ ಚರಿತ್ರೆಗಳನ್ನೂ ಅವರ ಉಚ್ಚತರವಾ ದ ತತ್ವಗಳನ್ನೂ ಕರ್ನಾಟಕ ಭಕ್ತವಿಜಯ ವೆಂಬ ಪು ಸ್ತಕ ರೂಪವಾಗಿ ಹೊರಗೆಡುಹ ಬೇಕೆಂಬುದೇ ಇವರ ಹಂಬಲ, ಕನ್ನಡ ನಾಡಿನಲ್ಲಿ ನಿಜಾಂ ಸ್ಥಾಂತಕ್ಕೆ ಸೇರಿ ದ ಭಾಗವು ದಾಸರ ಗೂಡೆಂದು ಹೆಮ್ಮೆಯಿಂದ ಹೇಳ ಕೊಳ್ಳುವಮಾತು. ಈ ಪ್ರಾಂತದಲ್ಲಿ ಆಗಿಹೋದ ದಾಸ ರ ಭಕ್ತರ ಚರಿತ್ರೆಗಳನ್ನೂ, ತತ್ವಗಳನ್ನೂ, ಇಷ್ಟ ಹೊತ್ತಿಗೆ ಹೊರಗೆಡುಹ ಬೇಕಾದದ್ದು ನಿಜಾಂ ಕನ್ನಡಿ ಗರ ಕರ್ತವ್ಯವಾಗಿತ್ತು. ಆದರೆ ತಾಯ್ನಾಡಿನ ಅಭಿಮಾ ನವಿಲ್ಲದೆ, ಕನ್ನಡತಿಗೆ ಬಂದ ದುರ್ದೆಶೆಯನ್ನು ಲಕ್ಷಿಸದೆ, ತಮ್ಮ ಸುಖೋಪ ಭೋಗಗಳಲ್ಲಿಯೇ ಲೋಲುಪರಾಗಿ ಇದ್ದ ಒಬ್ಬಬ್ಬ ಸುಶಿಕ್ಷಿತರೆಂಬುವರು ಸಹ ತಮ್ಮ ತಮ್ಮಲ್ಲಿಯೇ ಕಲಹಗಳನ್ನು ಬೆಳಿಸಿಕೊಳ್ಳುತ್ತಿರುವಾಗ ಸಾಧಾರಣ ಜನರ ಸ್ಥಿತಿಯನ್ನರಿಯದೆ ಕಣ್ಣು ಮುಚ್ಚಿ ಕುಳತಿರುವಾಗ, ತಮಗೆ ಮಾತಾಡಲು ಸಹ ಶಕ್ತಿ ಇಲ್ಲ ದಿರುವಾಗ ಇವರಿಂದ ಇಂತಹ ಮಹಾತ್ಕಾರ್ಯಗಳಾಗು ವವೆಂದು ನಂಬುವುದು ದೂರಿನ ತಪಸ್ಸು. ಇದೆಲ್ಲವನ್ನು ರಿತೇ, ನಿಜಾಂ ಕನ್ನಡಿಗರು ಕೈಕಟ್ಟಿಕೊಂಡು ಕೂತಿದ್ದ ನ್ನು ಕಂಡೇ ದಾಸರು ಈ ಕೆಲಸಕ್ಕೆ ತೊಡಗಿರುವರೆಂದು ತಿಳಿಯುತ್ತದೆ. ಇಂತಹ ಸಮಯದಲ್ಲಾದರೂ ಕಂಬ್ಲಿ ರೆಮ, ನಮ್ಮನಾಡಿನ ಕೀರ್ತಿಯನ್ನೂ, ಪವಿತ್ರತೆಯ ನ್ನೂ, ಇಡೀ ಭರತಖಂಡದಲ್ಲಿಯೇ ಹೆಬ್ಬಿಸಲು ಹೊರ ಟಿರುವ ಈ ದಾಸರ ಕಾರ್ಯವನ್ನು ನೆರವೇರಿಸುವದರ ಲ್ಲಿ ಭಾಗಿಗಳಾಗಿ ಕೈಲಾದಮಟ್ಟಿಗೆ ನಾಡುನುಡಿಯ ಸೇವೆ ಮಾಡಲು ಸಿದ್ಧರಾಗಬೇಕಲ್ಲದೆ, ಬಂದವರ ಮುಂದೆ ಯೂ ಮದ್ದಾನೆಯಂತೆ ಬಿದ್ದುಕೊಂಡಿರುವದು ಸರಿಯ ಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ದಾಸರವರು ಈ ಗಾಗಲೇ ಎಷ್ಟೋ ಸಂಗತಿಗಳನ್ನು ಸಂಗ್ರಹಿಸಿರುವರು ದಾಸರ ಗೂಡಾದ ಈ ಭಾಗದಿಂದ ಇನ್ನೂ ಹೆಚ್ಚಾಗಿ ಸಂಗ್ರಹಿಸತಕ್ಕದ್ದಾಗಿದೆ. ಇದಕ್ಕಾಗಿಯೇ ಈ ಪ್ರಾಂತ ವನ್ನು ಸಂಚರಿಸಲು ಹೊರಟಿರುವರು. ನಿಜಾಂ ಕರ್ನಾ ಟಕವನ್ನು ತಿರುಗಾಡಲು ಅನುಕೂಲವಾಗಬೇಕೆಂದು ತುಂಗಭದ್ರೆಯನ್ನು ವಸತಿಯಾಗಿ ಮಾಡಿರುವರು ತಮ್ಮ ಕಾರ್ಯವು ಕೊನೆಕಾಣುವವರೆಗೂ ಈ ಸ್ಥಳದಿಂದ ಕದ ಲುವದಿಲ್ಲವಂತೆ. ಈ ಸಮಯದಲ್ಲಿ ನಿಜಾಂ ಕನ್ನಡಿಗ ರು ಇವರಿಂದ ತಮಗಾಗಬೇಕಾದ,ಲಾಭವನ್ನು ಪಡಿಯ ದೇ ಇರಬಾರದು, ಮತ್ತು ಇವರ ಉದ್ದೇಶವನ್ನು ನೆರ ವೇರಿಸಲು ತಮ್ಮ ಕೈಲಾದಮಟ್ಟಿಗೆ ಸಹಾಯ ಮಾಡ ಲು ಸಿದ್ಧರಾಗಲೇಬೇಕು. ಇವರಿಂದ ಕಲಿಯತಕ್ಕ ವಿ ಷಯಗಳು ಎಷ್ಟೋ ಇವೆ. ಕಲಿತುಕೊಳ್ಳಲಿಚ್ಚಿಸುವವರು ಪತ್ರ ವ್ಯವಹಾರದಿಂದಾಗಿಲೀ ಸ್ವತಃ ಸಂದರ್ಶಿಸಿಯಾ ಗಲೀ ಕಲಿತುಕೊಳ್ಳ ಬಹುದು. ತಮ್ಮ ಕೈಲಾದ ಮಟ್ಟಿ ಗೆ ತನ್ಮೂಂದ ಈ ನಾಡಿನ ಜನರಿಗೆ ಮಾಡಬೇಕಾದ ಸ ಹಾಯವನ್ನು ಅವರು ಮಾಡಲು ಸಿದ್ಧರಾಗಿರುವರು ಇ ನ್ನು ಮೇಲೆ ಬೆಂಗಳೂರಿನಿಂದ ಹೊರಡುವ 'ಸುಬೋಧ' ಮಾಸ ಪತ್ರಿಕೆಯಲ್ಲಿ ದಾಸರ ಪದಗಳನ್ನು ಅವುಗಳ ನಿ ಜವಾದ ಅರ್ಥಗಳೊಂದಿಗೆ ತತ್ವಗಳನ್ನು, ತಿಳಿಸುತ್ತಾ ಪ್ರಸಿದ್ಧಿಸ ವೆಂದೂ, ಹೇಳಿರುವರು ಇವರು ಈಗಾಗಲೇ ಗದ್ವಾಲ್ ಕಡೆಗೆ ಹೋಗಿ ಕೆಲವು ಸ್ಥಳಗಳನ್ನು ನೋ ಡಿಕೊಂಡು ಬಂದಿರುವರು ಈಗ ರಾಯಚೂರಿನಲ್ಲಿರುವ ರು. ಇಲ್ಲಿ ೩-೪ ಕಥೆಗಳಾದವು. ಇನ್ನು ಮುಂದೆ ಮಾ ನ್ವಿ ಲಿಂಗಸೂಗೂರು, ಟೀಕಲಪರ್ವಿ, ಮಂತಾದ ದಾಸಾ ರ್ಯರ ಸ್ಥಳಗಳಿಗೂ, ಹೋಗತಕ್ಕವರಾಗಿದ್ದಾರೆ.

ಉಪಕಾರಕ್ಕೆ ಪ್ರತ್ಯುಪಕಾರವನ್ನು ಬಯಸದೆ ನಿಜಾಂ ಕನ್ನಡಿಗರಲ್ಲಿ ಕನ್ನಡದ ಅಭಿಮಾನವನ್ನು ಹು ಟ್ಟಿಸಿ ನವ ಚೈತನ್ಯವನ್ನುಂಟುಮಾಡಬೇಕಾಗಿ ದಾಸರ ವರಿಗೆ ಬೇಡಿಕೆ.

ಒಂದು ಭವಿಷ್ಯ.

ಜಗತ್ಪ್ರಸಿದ್ಧ ಆಂಗ್ಲೇಯ ಜ್ಯೋತಿಷ್ಯರಾದ ಮಿ. ಆರ್. ಎಚ್. ನೇಲರ್‌ರವರು, ಭರತ ಖಂಡದಲ್ಲಿ ಬ್ರಿಟಿ ಷರ ಆಳ್ವಿಕೆಗೆ ವಿರುದ್ಧವಾದ ಚಳವಳಿಯು 'ಕ್ರಿಸ್‌ಮ ಸ್ ದೇ' ಯಾಗಿಯಿತು ಅತ್ಯಂತ ಉಗ್ರ ಸ್ವರೂಪವನ್ನು ತಾಳುವದೆಂದೂ, ಬ್ರಿಟಿಷ್ ಸರ್ಕಾರದವರು ಕ್ಷಿಪ್ರದಲ್ಲಿಯೇ ಭರತ ಖಂಡದಲ್ಲಿ ಅತ್ಯಂತ ಭಯಂಕರವಾದ ದ ಬ್ಬಾಳಿಕೆಯನ್ನು ನಡೆಸುವರೆಂದೂ, 1932 ನೇ ಮೇ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಭರತ ಖಂಡದ ವಿದ್ಯ ವಾನಗಳು ಅತ್ಯಾಶ್ಚರ್ಯ ಕರವಾದ ರೀತಿಯಲ್ಲಿ ಮಾ ರ್ಪಾಡುವದೆಂದೂ ಭವಿಷ್ಯ ಹೇಳಿರುವರು,

ಮಿ. ಗಾಂಧಿಯವರೊಡನೆ
ಪ್ರಶ್ನೋತ್ತರಗಳು.

ತಾ|| ೨೮—೧೨—೩೧ ನೇ ರಾತ್ರಿ, ಮಿಚಿಸ್ಸಿ ಕ್ ಹೋಟೆಲಿನ ಸಭೆ ಯಾದಮೇಲೆ, ಕೆಲವು ಸದಸ್ಯರು ಮಹಾತ್ಮರಿಗೆ ಪ್ರಶ್ನೆಗಳನ್ನು ಹಾಕಿ ದರು:—

ಪ್ರ. ವಿಶೇಷ ಕಾನೂನುಗಳನ್ನು ತೆಗೆದುಹಾಕಿದರೆ ನೀ ವು ಸರ್ಕಾರದವರೊಂದಿಗೆ ಸಹಕರಿಸುವಿರೋ?

ಉ. ಸದ್ಯಕ್ಕೇನೋ ವಿಶೇಷ ಕಾನೂನುಗಳು ಅಷ್ಟ ವಾಗಿವೆ. ಇತರೆ ವಿಷಯಗಳನ್ನೂ ಗಮನಿಸ ಬೇಕಾಗುತ್ತದೆ.

ಪ್ರ. ಬಂಗಾಳ್ಯ, ಪಿ ಮತ್ತು ಪ್ರಾಂಟಿಯರ್ ದೇ ಶಗಳಿಗೆ ನೀವೇ ಖುದ್ದಾಗಿಹೋಗಿ ಅಧಿಕಾರಿಗ ಳೊಡನೆ ಸಂಧಾನಿಸಿ ಆದರ ವಿಷಯಗಳನ್ನು ತಿಳಿ ದುಕೊಂಡು ನಂತರ ಕಾನೂನುಗಳನ್ನು ತೆಗೆದು ಹಾಕಲು, ಅಧವಾ ಬಿಡಲು, ಏತಕ್ಕೆ ಆಲೋಚಿ ಸುವಂತೆ ಮಾಡಬಾರದ?

ಉ. ನನಗೆ ಈ ವಿಷಯದಲ್ಲಿ ಬಹಳ ಸಂತೋಷ ವಾ ದ್ದ ಇನ್ವಿಸರವರನ್ನೂ ವಿಲಿಂಗ್ಡನ್ ಸಾಹೇಬರ ನ್ನೂ, ಎಷ್ಟು ಸಲ ಕೇಳಿಕೊಂಡೆನೂ, ಫ್ರಾಂಟಿ ಯರ್ ದೇಶಕ್ಕೆ ನಾನು ಹೋಗಲು ಒಪ್ಪಿಗೆಕೊ ಡಲಿಲ್ಲ ಈಗಲಾದರೂ ಕೂಡ ಕಾನೂನು ಭಂಗ ಮಾಡಿ ಯು ಪಿ ಬಂಗಾಳ, ಹಿಜಲೀ, ಚಿಟ್ಟಾ ಗಾಂಗ್ ಅಥವಾ ಫ್ರಾಂಟಿಯರ್ ದೇಶಗಳಿಗೆ ಹೋಗಲಪೇಕ್ಷಿಸುವುದಿಲ್ಲ. ಸರ್ಕಾರದವರಿಗೆ ತೊಂದರೆಯನ್ನು ಕೊಡಲೆಣಿಸುವುದಿಲ್ಲ. ನನ್ನ ಸ ತ್ಯಾಗ್ರಹವಾದರೂ, ಆಕ್ಷೇ ಶಾಂತಿಕರವಾಗಿದೆ. ಸರ್ಕಾರದವರ ಯಾರಾದರೂ ಇವರಿ ಅವರು ನ ನ್ನ ವಕೀಲಿ ವಹಿಸಿ ಸರ್ಕಾರಕ್ಕೆ ಹೋಗಿ ಹೇಳ ಲಿ. ನಾನು ಗಡೀ ಪ್ರಾಂತ್ಯಕ್ಕೆ ಹೋಗಿ ಶಾಂತಿ ಸ್ಥಾಪನೆಗೆ ದೊಡ್ಡ ಸಹಾಯವನ್ನು ಮಾಡಿ ನೆ ಸು. ತಮ್ಮಧ್ಯೇಯಗಳಿಗೆ ನನ್ನ ಸಹಾಯ ವಾಗುವ ದೆಂದವರಿಂತರೆ ನನ್ನ ಮಾತುಕೇಳುವರು. ಅಬ್ದುಲ್ ಘಫರ್‌ಖಾನರಾದರೂ ಕೂಡ ನನ್ನ ಮಾತು ಕೇ ಳುವರೆಂಬುದು ಸರ್ಕಾರಕ್ಕೇ ಗೊತ್ತಿದೆ.

ಪ್ರ. ಇನ್ನೊಂದು ರಾಜ್ಯಾಂಗ ಪದ್ಧತಿಯು ಬರುವವೆ ರಿಗೂ, ಸರ್ಕಾರದವರೊಂದಿಗೆ ಸಹಕರಿಸುತ್ತೇ ನೆಂದು ಧೈರ್ಯದಿಂದ ಸ್ವಕಟಿಸಿ ಸರ್ಕಾರದವರ ವಿಶೇಷ ಕಾನೂನುಗಳನ್ನು ಹಿಂದಕ್ಕೆ ತೆಗೆಯುವಂ ತೆ ಕೇಳಿ ಮಾಡಬಾರದು?

ಉ. ನಾನು ಹಾಗೆ ಹೇಳುತ್ತಲೇ ಬಂದಿದ್ದೇನೆ. ಆದರೆ ನನ್ನ ಇಷ್ಟಸ್ವಕಾರ ನಾನು ಸಹಕರಿಸುವೆನು. ಇಂಥಾ ವಿಷಮವಾತಾವರಣದಲ್ಲಿ, ಹೊಸರಾಜ್ಯಾಂ ಗ ಪದ್ಧತಿಯನ್ನು ಜಾರಿಗೆ ತರುತ್ತೇನೆಂದು ಸರ್ಕಾ ರದವರುನಂಬುವುದಾದರೆದಿಡ್ಡತ್ವಾಗಿ ವ್ಯವಹರಿಸಿದಂತೆ.

ಗಡೀನಾಡಿನ ಸುಧಾರಣೆಗಳು

ಇಲ್ಲಿ ಸುಧಾರಣೆಗಳನ್ನು ತರಲು ಶೀಘ್ರ ಪ್ರಯ ತ್ನಗಳು ನಡೆಯುತ್ತಲಿವೆ. ಮಿ ಡನ್ನೆಟ್‌ರವರು ಈ ಬಗ್ಗೆ ವಿಷಾದದ ಟೆಲ್ ಕನಿಶನರೊಂದಿಗೂ, ಇತರ ಅ ಧಿಕಾರಿಗಳೊಂದಿಗೂ, ಚರ್ಚೆ ನಡೆಸಿರುವರು.

ಇಲ್ಲಿನ ನ್ಯಾಯವಿಧಾಯಕ ಸಭೆಯು 40 ಸದಸ್ಯ ರಿಂದ ಕೂಡಿರಬೇಕು 26 ಸದಸ್ಯರು ಜನಗಳಿಂದ ಆರಿಸ ಲ್ಪಡಬೇಕು. 14 ಜನರುಸರ್ಕಾರದವರಿಂದ ನಿಯಮಿಸಲ್ಪ ಡಬೇಕು. ಜನಸಂಖೆಯ ಲೆಕ್ಕಾಚಾರದಂತೆ ಸಣ್ಣ ವರ್ಗ ದವರಾದ ಹಿಂದೂ ಸಿಕ್ಖರಿಗೆ ಮೂರಂಶ್ಯ ಸ್ಥಾನಗಳು ದೊರೆಯುತ್ತವೆ. ಸರ್ಕಾರದ ಮಂತ್ರಿಮಂಡಲಕ್ಕೆ ಒಬ್ಬ ಮಂತ್ರಿಯೂ ಒಬ್ಬ ಮುಖ್ಯ ಸದಸ್ಯನೂ ಇರುತ್ತಾರೆ ಅಲ್ಲಿಯ ಸ್ಥಿತಿಗತಿಗಳು ಕೆಟ್ಟದ್ದರಿಂ, ಸುಧಾರಣೆಗಳನು ಜಾಗ್ರತೆಯಲ್ಲಿ ಜಾರಿಗೆ ತರುವರಂತೆ.

ಕರ್ನಾಟಕ ಕೇಸರಿಯಲ್ಲಿ ಜಾಹೀರಾತಿನ ದರಗಳು.

Advertisement Rates.

	೧ ವರ್ಷಕ್ಕೆ	೬ ತಿಂಗಳಿಗೆ	೩ ತಿಂಗಳಿಗೆ	ಒಂದು ಸಲಕ್ಕೆ
ಪೂರಾ ೧ ಪುಟಕ್ಕೆ	೧೩೦—೦—೦	೭೦—೦—೦	೪೦—೦—೦	೧೫—೦—೦
ಅರ್ಧ ಪುಟಕ್ಕೆ	೭೦—೦—೦	೪೦—೦—೦	೨೫—೦—೦	೮—೦—೦
ಕಾಲುಪುಟಕ್ಕೆ	೪೦—೦—೦	೨೫—೦—೦	೧೫—೦—೦	೫—೦—೦
ಎಂಟೆನೆಯ್ದೊಂದು ಪುಟಕ್ಕೆ	೨೫—೦—೦	೧೫—೦—೦	೮—೦—೦	೩—೦—೦
ಹದಿನಾರನೆಯ್ದೊಂದು ಪುಟಕ್ಕೆ	೧೫—೦—೦	೮—೦—೦	೫—೦—೦	೨—೦—೦

ಹಿಂದೀ ಪಾಠಶಾಲೆ

ಮೂರೇ ತಿಂಗಳಲ್ಲಿ ಓದಲಿಕ್ಕೂ ಮಾತಾಡಲಿಕ್ಕೂ ಬರುವಂತೆ ಶಿಕ್ಷಣವೇರ್ಪಟ್ಟಿರುವುದು.

ಬ್ರಾಹ್ಮಣರ ಬೀದಿಯಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ಪ್ರತಿನಿತ್ಯವೂ ಬ್ರಾಹ್ಮಣಕಾಲ 7-30 ಯಿಂದ 9 ರ ವರಿಗೂ, ಸಾಯಂಕಾಲ 6-30 ಯಿಂದ 7-30 ರ ವರಿಗೂ, ಹಿಂದೀ ಶಿಕ್ಷಣವು ಕೊಡಲ್ಪಡುವುದು. ಸಮಯಾಭಾವಕ್ಕೆ ಕೋಚಿಂಗನಗಳಿಗೆ ಜಾಸ್ತಿಯಾಗಿ ಪರಿಚಯವಿರುವದು, ಈ ಭಾಷೆಯನ್ನು ಅಭ್ಯಸಿಸ ಬೇಕಾದದ್ದು ದೇಶಾಭಿಮಾನಿಗಳ ಆಗತ್ಯಕರ್ತವ್ಯವಾದ್ದರಿಂದ ಈ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ವಿನಂತಿಸಲಾಗಿದೆ. ಫೆಬ್ರುವರಿ 1932 ರ ಮೊದಲನೇ ವಾರದಲ್ಲಿ ನಡೆಯುವ ಹಿಂದೀಪರೀಕ್ಷೆಗೆ ಕೂಡಲವಕಾಶವಿರುವುದು. ಈಗಲೇ ಸೇರಬೇಕು.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

ಮಹಾತ್ಮಗಾಂಧಿಯವರ ಆತ್ಮಕಥೆ	ಅಧವಾ ಸತ್ಯ ಶೋಧನೆ.	ಕ್ರಯ
"	ಒಂದನೆಯ ಭಾಗ	೦—೧೫—೦
"	ಎರಡನೆಯ ಭಾಗ	೦—೧೫—೦
	ಮೂರನೆಯ ಭಾಗ	೦—೯—೦
"	ನಾಲ್ಕನೆಯ ಭಾಗ	೧—೮—೦
"	ಐದನೆಯ ಭಾಗ	೧—೮—೦
ಮಹಾತ್ಮಗಾಂಧಿಯವರ ಬರೆದ	" ಅನಾಸಕ್ತಿ ಯೋಗ "	೦—೧೨—೦

(ಆತ್ಮ ಕಥೆಯ ಐದು ಭಾಗಗಳನ್ನು ಕೊಳ್ಳುವವರಿಗೆ ಅನಾಸಕ್ತಿ ಯೋಗವು ಉಚಿತ)

ಮಹಾತ್ಮಗಾಂಧಿ	ಚಿಕ್ಕ ಪುಸ್ತಕ	೦—೧—೦
ರಾಷ್ಟ್ರೀಯ ಗೀತ.		೦—೩—೦

ಹಿಂದೀ ಪುಸ್ತಕಗಳು.

Hindi English Self Instructor.		1—0—0
ಹಿಂದೀ ಬಾಲ ಶಿಕ್ಷಣ.	(ಕನ್ನಡ ತರ್ಜುಮೆ)	೦—೮—೬
ಲಘು ಪುಸ್ತಕ	ನಂ ೧	೦—೩—೦
	ನಂ ೨	೦—೬—೦
ಹಿಂದೀ ಸುಲಭ ಪುಸ್ತಕ		೦—೫—೦
ಪೊಸರೀ		೦—೬—೦
ಮಜೇದಾರ ಕಮಾಸೆಯಿ		೦—೫—೦
ಅನುವಾದನಾಲ ಭಾಗ೧		೦—೪—೦

ಈ ಪುಸ್ತಕಗಳು ಸಾಧಿಸಿದ ವರಿಷ್ಟರಿಗೆ ಮಾತ್ರ ಪುಸ್ತಕಗಳಾಗಿನೆ
ಕರ್ನಾಟಕ ಕೇಸರಿ ಕಾರ್ಯಾಲಯ. ಬಳ್ಳಾರಿ.

ಪ್ರೇಮ ಚಿಕಿತ್ಸಾಲಯ.

ಕಿಸ್ಮತ್‌ಪಾಟಾಲ್ ಕೋಡು ಬಳ್ಳಾರಿ.

[ಸಬ್ ಏಬೆಂಟರು:—ಮಾಣಿಂಡ ಫಾರ್ಮಸ್ಯೂಟಿಕಲ್ ವರ್ಕ್ಸ್ ಬೊಂಬಾಯಿ.

ಹೆಂಗಸರಿಗೆ ಮುಕ್ಕಳಿಗೆ ಬರುವ ರೋಗಗಳಿಗೂ, ಮತ್ತು ಇತರೆ ಎಲ್ಲಾ ರೋಗಗಳಿಗೂ, ನಮ್ಮಲ್ಲಿ ಬಿಮ್ಮ ಚೈತ್ರಿ ರನ್ನಗಳಿಂದಲೂ, ಆಯುರ್ವೇದೀಯ ಔಷಧ ಗಳಿಂದಲೂ, ಶೀಘ್ರ ಚಿಕಿತ್ಸೆಯು ದೊರೆಯುತ್ತದೆ.

ವಿ. ಎಂ, ಗಿರಿ ಅಂಡ್ ಸನ್ಸ್.

ತೇರುಬೀದಿ ಬಳ್ಳಾರಿ.

ಏಜಂಟರು:- **ಲೋಧ್ರಾ**
(ಗವರ್ನರಮೆಂಟ್ ಕೋಗಸ್ಸಾಪಾರಿಕೆ)

ಆಯುರ್ವೇದೀಯ ಮತ್ತು ಇಂಗ್ಲಿಷ್ ಔಷಧಗಳೂ,ಅಧಿಕಾರಿಗಳಿಗೂ, ಗೃಹಸ್ಥರಿಗೂ, ಅತ್ಯವಶ್ಯವಾಗಿ ನಮಗೆ ಬಳಕೆಗೆ ಬೇಕಾಗುವ ಚಿಲ್ಲರೆವಸ್ತುಗಳೂ, ಪೈಪರವರು ಸಮಾಧಾನಗಳೂ,ಸಾಲದ ಬೆಲೆಗೆ ದೊರೆಯುತ್ತವೆ.

೨. ೧ ರಿ, ಜನವರಿಂದ ಶಮೂರಾದ ಆತ್ಯುತ್ತಮ ಹೆಸ್ಸಿನ ಬಟ್ಟೆಗಳು
ಸನ್ಮಾನಿಗಳಿಗೆ ದೊರೆಯುತ್ತವೆ.

ರಘು ಮುಂಚಾಲಿ ಮೆಡಿಕಲ್ ಹಾಲ್.

ಬ್ರಾಹ್ಮಣರ ಬೀದಿ ಬಳ್ಳಾರಿ.

ಸಮ್ಮಲ್ಲಿ ನ್ಯಾಶನಲ್ ಆಗಿ ಗುಣಮುಂಮುಖಾದವಸಿದ್ಧಿಷಧಗಳು
ಆತಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಹೆಸರು ಪಕೆ. ೨೦ ಮಾತ್ರೆ	ಕ್ರಯ ರೂ ೩—೦—೦
ಚಿಲ್ಲಿ ಪೌಷ್ಟ್ ತೊಲೆ ಪಬ್ಬಿಗೆ	೧—೦—೦
ಆಮೃತಾಲ್ಕ ಫಾರ್ (ಸಕಲ ರೋಗಗಳನ್ನೂ ಗುಣಪಡಿಸುತ್ತೆ.	೮—೪—೦
ವಿಷಮ ಸನ್ನಿಪಾತ ಜ್ವರಗಳಿಗೆ ಮಾತ್ರೆ ೩೦ ಸೀಸ	೫—೦—೦

FOR SALE

1 Boston hand Press, 5—

Prints 5" × 8" matter neatly, in good working order. rice moderate & reasonable

2 New cycle style Machines—

Used only 1 wice or thrice. Perfectly new.

Price considerably cheap. Apply sharp—

KARNATAKA KESARI. OFFICE

Bellary.

ಶ್ರೇಷ್ಠವಾದ ಮಿಷ್ಟ್ ದಾರದ ಪುಂಡೆಗಳು.

ಈ ದಾರದ ಪುಂಡೆಗಳು ಫಿಟ್ಟಿಯಾಗಿಯೂ, ನಯವಾಗಿಯೂ, ಇರುವುದರಿಂದ ಮಷ್ಟ್ ಫಿ ಹೊಲಿಯುವುದಕ್ಕೂ, ಕೈಲಿ ಹೊಲಿಯುವುದಕ್ಕೂ ಸಾಧ್ಯವಾಗಿ ಉಪಯೋಗಕ್ಕೆ ಬರುತ್ತವೆ. ಬಿಳಿ ಪು, ಕಪ್ಪು, ಕಾಕಿ, ನೀಲ್ಟ್ ಇತರ ರಂಗುಗಳಲ್ಲಿ ಅನೇಕ ಸೈಜಿನ ದಾರದ ಸ್ಯಾಕುಗಳ, ಕಡಿಮೆ ಧಾರಣೆಗೆ ದೊರೆಯುತ್ತವೆ.

ದರ ಬರೆಸಿ ತೀರುಕೊಳ್ಳಿರಿ

ಸಿ. V. & Sons, Car Street Bellary.

ಕೆ. ವೀರಭದ್ರಪ್ಪ. ಅಂಡ್ ಸನ್ಸ್ ತೇರು ಬೀದಿ ಬಳ್ಳಾರಿ.

THE GRADUATES' TRADING ASSOCIATION,

General merchants, Gramaphone Dealers & News Agents,

CAR STREET BELLARY.

ದಿ ಗ್ರಾಜ್ಯುಯೇಟ್ಸ್

ಟ್ರೇಡಿಂಗ್ ಅಸೋಸಿಯೇಷನ್,

ಜನರಲ್ ಮರ್ಚೆಂಟ್ಸ್, ಗ್ರಾಮೊಫೋನ್ ಡೀಲರ್ಸ್ ಅಂಡ್ ನ್ಯೂಸ್ ಏಜೆಂಟ್ಸ್.

ತೇರು ಬೀದಿ ಬಳ್ಳಾರಿ.

ದಿ ಎಂಪೈರ್ ಆಫ್ ಇಂಡಿಯಾ. ಲೈಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ

ಈ ಕಂಪನಿಯ ಮುಖ್ಯ ಲಕ್ಷಣಗಳು ಮೊದಲು

೧. ಅತಿ ಕಡಿಮೆ ಬೆಲೆಗಾಗಿ ಸ್ಪಷ್ಟವಿಸ್ತೃತವಾದ ಪಾಲಿಸಿ.

೨. ಪಾಲಿಸಿದಾರರ ಹಣಕ್ಕೆ ಸಾಟಿಯಿಲ್ಲದ ಭದ್ರತೆಯುಳ್ಳದ್ದು.

೩. ಕಂಪನಿಯ ಲಾಭಾಂಶವನ್ನು ಇನ್ಶೂರೆನ್ಸ್ ಪಾಲಿಸಿಯ ಅಷ್ಟಿಷ್ಟದ ಮುಂಚಾಗಿ ಸಂಪೂರ್ಣವಾಗಿ ಪಾಲಿಸಿದಾರರಿಗೆ ಹಂಚಿಕೆಯಾಗುವುದು.

೪. ಕಂಪನಿಯ ಲಾಭಾಂಶದಲ್ಲಿ ಸೇವಾದಾರರಿಗೆ ಹೆಚ್ಚಿನ ಪಾಲು ಕೊಡುವುದು.

೫. ಪಾಲಿಸಿಯು ಜಪ್ತಿಯಾದ ಸಂದರ್ಭದಲ್ಲಿ ಸೇವಾದಾರರಿಗೆ ಹಣವನ್ನು ಹಿಂತಿರುಗಿಸುವುದು.

೬. ಪಾಲಿಸಿಯು ಪೂರ್ತಿಯಾಗಿ ಕಟ್ಟಿದ ಬಳಿಕ ಕಂಪನಿಯಿಂದ ಕೊಡಮಾಡಲಾಗುವ ಸೌಕರ್ಯಗಳು ಬಹಳ ಉದಾತ್ತವಾದ್ದಾಗಿರುವುದು.

೭. ಪಾಲಿಸಿಯು ಸೌಕರ್ಯಗಳನ್ನು ಪಡೆಯುವ ಸಂದರ್ಭ ಬಂದಾಗ ಅಧ್ಯಕ್ಷರುಗಳಿಗೆ ಕೂಡಲೆ ತಿಳಿಸಿಕೊಳ್ಳುವುದು.

ಏಜೆಂಟ್— **ಎಂ. ವೆಂಕೋಬರಾವ್. ಬಿ. ಎ.**
ಸತ್ಯನಾರಾಯಣಪೇಟೆ
ಬಳ್ಳಾರಿ.

Commerce has conquered the world

FREE INSTRUCTIONS

THE KARNATAKA TYPE-WRITING INSTITUTE,
& Commercial Agency.
Bargalore Road, Bellary.

Agents & dealers in—
Wood-stock, Corona and other typewriters of all makes, best ribbons carbons, and Swadeshi fountain pens etc.

HOW TO LEARN TOUCH TYPE-WRITING IN 20 days
short hand a speciality.
(Seperate accommodation for lady students)
Job works & repairs undertaken on moderate charges.

ಆರ್ಡರ್‌ಗಳನ್ನು ಕಮ್ಮ ದರವಲ್ಲಿ ಪೂರೈಸಲಾಗುತ್ತೆ.

Prospectus sent free on application.

ARYA VAIDYALAYA BELLARY

Pandit C.S. Shastry's Patent Medicines

MONEY RETURNED IF NOT CURED

1 FEVER KILLER.

Any fever completly cured in 4 days — 8 oz Bottle Rs 2—0—0

2 NAVAJEEVAN PAK.

King of Tonic for ds (sweet) — 1 lb Rs 1—8—0

3 PRAMEHA BHANJINI

Gonorrhoea of two years duration cured in 12 days — Rs 6—0—0

ಆರ್ಯ ವೈದ್ಯಾಲಯ ಬಳ್ಳಾರಿ.

ಪಂಡಿತ್. ಸಿ. ಯಸ್. ಶಾಸ್ತ್ರಿಯವರ ಆಯುರ್ವೇದೀಯ ಸಿದ್ಧೌಷಧಗಳು.

ಗ್ಯಾರಂಟಿಪೂರ್ವಕ ಗುಣ ಪಾಪಸು

" ಜ್ವರ ಸಂಹಾರಿ. "

ಸಾಮಾನ್ಯ ಎಲ್ಲಾ ಜ್ವರಗಳು ಮೂರು ದಿನಗಳಲ್ಲಿ ಸಂಪೂರ್ಣ ಗುಣ — ೪, ಔನ್ಸಿನ ಬಾಟ್ಲಿ ರೂ. ೨—೦—೦

ನವಜೀವನಪಾಕ

ಪೌಷ್ಟಿಕ ರಸಾಯನ — ಒಂದು ಪೌಂ — ರೂ. ೧—೮—೦

ಪ್ರಮೇಹ ಭಂಜಿನಿ

ಎರಡು ವರ್ಷದೊಳಗಿನ ಪ್ರಮೇಹವು ೧೨ ದಿನಗಳಲ್ಲಿ ಖಾತ್ರಿ ಗುಣ ಹೊಂದುತ್ತದೆ. — ರೂ ೬—೦—೦

ಈ ಔಷಧಾಲಯದಲ್ಲಿ ಬ್ರಾಂಡೆಡ್, ಪಕ್ಷಪಾತ, ಪ್ರತೀಕ್ಷೆ, ಬಂಡಿತನ ಮುಂತಾದ ಮಹಾ ವ್ಯಾಧಿಗಳು ಎಷ್ಟು ಹಳೆಯವಾದುವು ಕಷ್ಟಸಾಧ್ಯವಾಗಿದ್ದವಾದರೂ ಶುದ್ಧ ಆಯುರ್ವೇದೀಯ ಔಷಧ, ಮಂತ್ರ, ಯಂತ್ರ, ತಂತ್ರಾದಿಗಳಿಂದ ಪರಿಹರಿಸಲ್ಪಡುತ್ತವೆ. ಒಮ್ಮೆ ಬಂದು ಸಂರಕ್ಷಿಸಿದರೆ ತಾನಾಗಿ ತೀರಿ ಬರುತ್ತವೆ.

ಸಿ. ಯಸ್. ಶಾಸ್ತ್ರಿ.
ಪ್ರೊಪ್ರೈಟರ್.

PRINTED & PUBLISHED BY T. B. KESHAVA RAO
AT SRI VOYARANYA PRESS. BELLARY.

REGISTERED NO M- 2736

ಕರ್ನಾಟಕ ಕೇಸರಿ

ಪ್ರತಿ ಸೋಮವಾರವೂ ಬಳ್ಳಾರಿ ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಚಂದಾ		ಸಂಪಾದಕರು	ಅರು ತಿಂಗಳಿಚಂದಾ.
ಸ್ವದೇಶದವರಿಗೆ	೩-೮-೦	ಟಿ. ಜಿ. ಕೇಶವರಾವ್.	ಸ್ವದೇಶದವರಿಗೆ ... ೧-೪-೦
ಪರಸ್ವದೇಶದವರಿಗೆ	೪-೦-೦	(ಪತ್ರಿಕೆ ೧೯೦೭)	ಪರಸ್ವದೇಶದವರಿಗೆ ... ೧-೮-೦

ವರ್ಷ ೧ ಬಳ್ಳಾರಿ ನಗರ—ಒನವರಿಯಂ ೨೫ ಸೋಮವಾರ ೧೯೨೦ ಸಂಚಿಕೆ ೧೩

ಮುಖಂಡರ ಕೈಸೆರೆ

ಮಹಾತ್ಮ ಗಾಂಧಿ

(ಯರವಾಡಾ ಸೆರೆಮನೆಯನ್ನು ಕಂಡರು)



ಸರ್ದಾರ್ ವಲ್ಲಭಭಾಯಿಪಟೇಲ್
ಇವರೂ ಯರವಾಡಾಕ್ಕೆ
ಸಾಗಿಸಲ್ಪಟ್ಟರು.



ಪಂಡಿತ ಜವಾಹರಲಾಲ್ ನೆಹರು
ಎರಡು ವರ್ಷ ಕಠಿಣ ಶಿಕ್ಷೆ,
೫೦೦ ರೂ. ದಂಡ.

ಉತ್ತಮ ಜಮೀನು ಬಗ್ಗೆ

ಕಿಲ್ಲೋಸ್ಕರ

ನೇಗಿಲನ್ನು ಉಪಯೋಗಿಸಿರಿ

ಈ ನೇಗಿಲುಗಳ ಗುಣವನ್ನು ಸಾವಿರಾರು ಒಕ್ಕಲಿಗರ ಅನುಭವವೇ ವರ್ಣನ ಮಾಡುತ್ತದೆ,

ನೇಗಿಲುಗಳ ಸಿಫಾರಸ್ ಪತ್ರವೆಂದರೆ, ಒಕ್ಕಲಿಗರ ಸಂತೋಷ ವೆಂಬುವದನ್ನು ತಿಳಿಯಿರಿ.

ಇವುಗಳಲ್ಲಿ ಎಲ್ಲ ನಮೂನೆಯು ಮತ್ತು ಕಡಿಮೆ ಬೆಲೆಯುಳ್ಳವೂ ಇವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಬೇಕು.

ಕಿಲ್ಲೋಸ್ಕರ ಬ್ರದರ್ಸ್ ಲಿಮಿಟೆಡ್

ಕಿಲ್ಲೋಸ್ಕರವಾಡಿ

ಸೌ. ಸಾ ಹಾ. ಎ.

ಸ್ವಾಮಿ ವಿವೇಕಾನಂದರ ೭೦ ನೆಯ ವರ್ಧಂತಿ. ಬಳ್ಳಾರಿ.

(ಶ್ರೀ ಸಿದ್ಧೇಶ್ವರಾನಂದರವರ ಉಪನ್ಯಾಸ.)

ಶ್ರೀ ಸಾರ್ವಜನಿಕ ಕೃಷ್ಣಾಶ್ರಮದ ಸ್ವಾಮಿ ಸಿದ್ಧೇಶ್ವರಾನಂದ ರವರು ಇಲ್ಲಿಗೆ ಬಂದು ಸುಮಾರು 15 ರಿಂದ 20 ದಿವಸಗಳಾಗಿದೆ ಅವರು ಹೈಸ್ಕೂಲಿನಲ್ಲಿ ಕೊಟ್ಟ ವ್ಯಾಖ್ಯಾನಗಳಿಂದ ಎಷ್ಟೋ ಸಜ್ಜನರಲ್ಲಿ ಸನ್ಮಾರ್ಗವನ್ನು ಉದ್ಭವಿಸಿದೆ ಹಾಗಾಯಿತು? ತಮ್ಮ ಕರ್ತವ್ಯವೇನು? ಜೈನರ ಕ್ಷೇಮವು, ಯಾವರೀತಿಯಲ್ಲಿದೆ? ವಗೈರೆ ಅನೇಕವಿಷಯಗಳಲ್ಲಿ ಅಜ್ಞಾನವ್ಯಕ್ತರಿಗೂ ಬೋಧಪ್ರದವಾದ, ಇವರ ಉಪನ್ಯಾಸಗಳ ಪ್ರಯೋಜನೆಯಿಂದ ಬಳ್ಳಾರಿಯವರಿಗೆ ಸ್ವಾಮಿ ವಿವೇಕಾನಂದವರ 70 ನೆಯ ವರ್ಧಂತಿ ಮಹೋತ್ಸವವನ್ನು ನೆನೆಯಿಸಬೇಕೆಂಬ ಕುತೂಹಲ ಹುಟ್ಟಿತು.

6—1—32 ನೇ ಸಾಯಂಕಾಲ ಇವರ ಏರ್ಪಾಟನ್ನು ಮಾಡಿ ಹೈಸ್ಕೂಲಿನಲ್ಲಿ ಹೆಡ್ಮಾಸ್ಟರವರು ಏರ್ಪಡಿಸಿದ್ದರು. ಸ್ವಾಧ್ಯಾಯೆಯೂ, ಸ್ವಾಮಿಜಿಯವರ ಶಿಲಾಮೂರ್ತಿಯೂ ಪುಷ್ಪಹಾರಗಳಿಂದ ಅಲಂಕೃತವಾಗಿದ್ದವು. ಸಭೆಯು ಪ್ರಾರಂಭವಾಗುವ ಮುಂಚೆ ಸ್ವಾಮಿಜಿಯವರ ಬಾಲ್ಯಜೀವನ, ವಿದ್ಯಾಭ್ಯಾಸ, ಸರಳ ಹಂಸರಿಗೆ ಜ್ಞಾನ, ವೈರಾಗ್ಯಗಳ ಪ್ರಬಲತೆ, ಮತ್ತು ಅವರ ಅನೆರಿಕಾ ಖಂಡದ ಪ್ರವಾಸ ಮುಂತಾದ ವಿಷಯಗಳಲ್ಲಿ ಗಂಭೀರ ವಾಣಿಯಲ್ಲಿ ಎಲ್ಲರಿಗೂ ಚಿತ್ರಪ್ರತಿಮೆಗಳೇನೆ ಕೂಡುವಂತೆ ಮಾಡಿ ವಿಳಂಬವಾದ ಉಪನ್ಯಾಸವನ್ನು ಕೊಟ್ಟರು. ಇವರ ಉಪನ್ಯಾಸದ ಕೆಲ ಮುಖ್ಯಸಾರಾಂಶವನ್ನು ಇಲ್ಲಿ ಕೊಟ್ಟಿದ್ದೇವೆ.

"ಸಹೋದರರೇ! ನೀವು ಸ್ವಾಮಿವಿವೇಕಾನಂದವರ 70 ನೆಯ ವಾರ್ಷಿಕಾರ್ಧಂತ್ಯೋತ್ಸವನ್ನು ವಿಜೃಂಭಿಸಿ, ನನಗೆ ಅವರ ವಿಷಯದಲ್ಲಿ ಮಾತಾಡಲು ಅವಕಾಶ ಕೊಟ್ಟದ್ದಕ್ಕಾಗಿ ನಿಮಗೆ ಕೃತಜ್ಞನಿದ್ದೇನೆ.

ಬಾಲ್ಯ ವಿದ್ಯಾಭ್ಯಾಸ.

ಸ್ವಾಮಿವಿವೇಕಾನಂದರ ಜಾಲ್ಯದಹೆಸರು ನರೇಂದ್ರನಾಥ. ತಂದೆಯು ಖಂಗಾಳದ ಸುಪ್ರಸಿದ್ಧ ದತ್ತರ ವಂಶಕ್ಕೆ ಸೇರಿದ್ದರು. ಇವರ ತಂದೆಯು ದಾನಶೂರನಾಗಿ, ಅವರ ಮನೆಯು ಛತ್ರದಂತಿದ್ದಿತು. ಇವರಿಗೆ ಬಹಳ ಕಾಲದಿಂದ ಮಕ್ಕಳಾಗದೆ, ಇವರ ತಾಯಿಯ ಉಮಾದೇವತೆಯನ್ನು ಆರಾಧಿಸಿದವರ ಫಲವಾಗಿರಬೇಕೋ ಏನೋ ಎಂಬಂತೆ, ಹಿಂದು ಗಂಡುಕೂಸು ಉತ್ಪನ್ನವಾಯಿತು. ನರೇಂದ್ರನೆಂದು ನಾಮಕರಣ ಮಾಡಿದರು.

ಚಿಕ್ಕಂದಿನಲ್ಲಿ ಈ ಹುಡುಗನು ಬಹಳ ತುಂಟನಾಗಿ ಮನೆಯವರಿಗೆ ಬಹಳ ತೊಂದರೆ ಕೊಡುತ್ತಿದ್ದುದರಿಂದ, ಇವರತಾಯಿಯು "ಓ ಭುವನೇಶ್ವರಿತಮೆ! ನನ್ನ ಹೊಟ್ಟೆಯಲ್ಲಿ ಮನುಷ್ಯನು ಜನಿಸಿಲ್ಲಿ ಎನೆ. ಭೂತನನ್ನು ವರಪ್ರದಾನ ಮಾಡಿದ್ದೀಯೆ? ಎಂದು ಆಗಾಗ್ಗೆ ಹೇಳುತ್ತಿದ್ದಳು. ತರುವಾಯ ಇವರು, ಕೂಡಲೆ ಇವರು ಬಹಳ ತುಂಟರಾಗಿ ಮನಸ್ಸನ್ನು ಬೇರೆಕಡೆಗೆ ತಿರುಗಿಸಿಮುತ್ತಿದ್ದರು. ಉಪಾಧ್ಯಾಯರು ಕೇಳಿದಷ್ಟು ಎಲ್ಲವನ್ನೂ ಹೇಳಿಬಿಡುತ್ತಿದ್ದರು. ಚಿಕ್ಕಂದಿನಿಂದಲೆ ಇವರಿಗೆ ಧ್ಯಾನಾಸಕ್ತಿಯಿದ್ದಿತ್ತು. ಸಮಾಧಿಸ್ಥರಾಗುತ್ತಿದ್ದರು. ಒಂದು ದಿನ ಇವರಿಬ್ಬರ ಕೋಣೆಗೆ ಒಂದುಹಾವು ಹೋಗಿ ಹೊರಗೆ ಬರಿಸಲು ಗಲಾಟೆಯಾಗುತ್ತಿದ್ದರೂ, ಏಕಾಗ್ರಚಿತ್ತದಿಂದ ಧ್ಯಾನಿಸುತ್ತಿದ್ದರು. ಇವರಲ್ಲಿನ ಆಸ್ತಿತ್ವಗುಣವೂ ತು, ಇವರತಾಯಿಯು ರಾಮ, ಕೃಷ್ಣ, ಅರ್ಜುನ ಮುಂತಾದ ಗಾರರ ಕಥೆಗಳನ್ನು ಹೇಳಿ, ಬಾಲಕನ ಮನೋಭಾವಗಳಲ್ಲಿ ಪವಿತ್ರ ಭಾವನೆಯನ್ನುಂಟು ಮಾಡುತ್ತಿದ್ದಳು.

ಇವರು ಹೈಸ್ಕೂಲಿನಲ್ಲಿಯೂ, ಕಾಲೇಜಿನಲ್ಲಿಯೂ, ತಮ್ಮ ಪಾಠ್ಯಪುಸ್ತಕಗಳನ್ನೆ ಓದುತ್ತಿದ್ದರೆ, ಪಾಠ್ಯಪುಸ್ತಕಗಳನ್ನು ಆಳವಾಗಿ ಅಭ್ಯಾಸಿಸಿದರೆ, ಪೇಕ್ಸ್‌ಪಿಯರ್, ಗಿಬ್ಬನ್, ಬೈರನ್, ಗೋಲ್ಡ್‌ಸ್ಮಿತ್, ರೋಮ್‌ಚರಿತ್ರೆ ಮುಂತಾದವರ ಗ್ರಂಥಗಳನ್ನೆಲ್ಲಾ ಅಭ್ಯಾಸ ಮಾಡಿದರು. ಕಾಲೇಜಿನಲ್ಲಿ ಅವರ ಪಾಠಾನುಕಾಲವು ಬಹಳಾವಧಿಯೊಗುತ್ತಾ ಬಂದಿತು.

ಸತ್ಯ ಶೋಧನೆ.

ಇವರು ಕಾಲೇಜಿನಲ್ಲಿರಬೇಕಾದರೆ, ಮನೋಶಾಂತಿ ಇಲ್ಲದೆ, ಕೆಲವುಬಾರಿ ದೊಡ್ಡವ್ಯಾಪಾರಸ್ಥರಲ್ಲೆಲ್ಲಾ ಕೂಗಿ ದೇವರೆಲ್ಲಿದ್ದಾನೆ? ಎಂಬ ಪ್ರಶ್ನೆಯನ್ನು ಕಾಳುತ್ತಿದ್ದರು. ಯಾವ ಮಹಾನುಭಾವರೂ, ಇವರ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಡಲು ಸಮರ್ಥರಾಗಿರಲಿಲ್ಲ. ಬ್ರಹ್ಮಸಮಾಜದವರ ಲೇಖನಗಳನ್ನೂ, ಕೇಶವಚಂದ್ರಸೇನರ ವಿವರಣೆಯನ್ನೂ ಇವರು ಓದಿದರೂ, ಇವರಿಗೆ ಮನೋತೃಪ್ತಿಯಾಗಲಿಲ್ಲ. ಇವರ ವೇದಾಂತ ಜ್ಞಾನವು ಅಳವಾಗುತ್ತಾ ಬಂದಿತು.

ಇವರು ಹರ್ಬರ್ಟ್ ಸ್ಪೆನ್ಸರ್ ಎಂಬುವರು ಬರೆದ ಗ್ರಂಥಕ್ಕೆ ತಮ್ಮ ಸ್ವತಂತ್ರ ಟೀಕೆಗಳನ್ನು ಕಳುಹಿಸಿದರು. ಆವರು ಈ ಯುವಕನ ಪಾಂಡಿತ್ಯಕ್ಕೆ ಆಶ್ಚರ್ಯಪಟ್ಟು ಪುಂಡಿನೆಗ್ರೇಥದಲ್ಲಿ ಇವರ ಟೀಕೆಗಳಿಗೆ ಸರಿಯಾದಸ್ಥಾನವು ದೊರೆಯುವುದೆಂದು, ಅವರು ಪ್ರೋತ್ಸಾಹವನ್ನು ಕೊಟ್ಟರು.

೬ ನೇ ಪುಟದಲ್ಲಿ ನೋಡಿ.

ಮಹಾತ್ಮ ಗಾಂಧಿಯವರೂ ಸರ್ದಾರ್ ವಲ್ಲಭಭಾಯಿ ಪಟೇಲರವರೂ

ಬಂಧಿತರಾಗಿ, ಪೂನಾದ ಯರವಾಡ ಸೆರೆಮನೆಗೆ ಒಯ್ಯಲ್ಪಟ್ಟರು.

ಬಂಗಾಳದ ಶ್ರೀ ಸುಭಾಸಚಂದ್ರಬೋಸರವರು ಹಿಡಿಯಲ್ಪಟ್ಟು, ಎಲ್ಲಿಗೋ ಸಾಗಿಸಲ್ಪಟ್ಟರು.

[ಬೊಂಬಾಯಿ ಪಟ್ಟಣದ ಮುನಿಧನದಲ್ಲಿ ಮಹಾತ್ಮ ಗಾಂಧಿಯವರೂ, ತಮ್ಮ ಸ್ವಗೃಹದಲ್ಲಿ ಸರ್ದಾರ್ ಪಟೇಲರೂ, ೪ ನೇ ತಾ.ಪ್ರಾತಃಕಾಲ ೧೦೩೦ ನೇ ಇಸ್ವಿಯ ಎಷ್ಟ ನೇ ಕಲಂ ಪ್ರಕಾರ ಬಂಧಿಸಲ್ಪಟ್ಟು ಪ್ರತ್ಯೇಕ ಮೋಟಾರು ಕಾರುಗಳಲ್ಲಿ ಪೂನಾದ ಯರವಾಡ ಜೈಲಿಗೆ ಸಾಗಿಸಲ್ಪಟ್ಟರು. ಮಹಾತ್ಮ ಗಾಂಧಿಯವರನ್ನು ಹಿಡಿದದ್ದರಿಂದ ಇದೀ ಹಿಂದೂಸ್ಥಾನದಲ್ಲೇ ಸತ್ಯಾಗ್ರಹ ಚಳವಳಿಯು ಪ್ರಾರಂಭವಾಗಿದೆ]

ಬೊಂಬಾಯಿ, ಜನವರಿ 4.

ಬೊಂಬಾಯಿ ಪಟ್ಟಣದ ಪೋಲೀಸ್ ಕಮೀಶನರವರಾದ ನಿಲ್ಸ್ ರವರು ಇತರ ಪೋಲೀಸ್ ಅಧಿಕಾರಿಗಳೊಂದಿಗೆ ಬೆಳಗಿನಜಾವ 3 ಗಂಟೆಗೆ ಮುನಿಧವನಕ್ಕೆ ಬಂದರು ಮಹಾತ್ಮರ ಎದ್ದು ಬಾರಂಟನ್ನು ಓದಿದರು. ಅವರ ಕಲಬ್ಯುನ ಪ್ರಕಾರ ಸರ್ಕಾರದವರ ಇಷ್ಟ ಪ್ರಕಾರ, ಎಷ್ಟು ದಿವಸಗಳಾದರೂ ಅವರನ್ನು ಜೈಲಿನಲ್ಲಿಡಬಹುದಾಗಿದೆ ಮುಖಮಾರ್ಜನಾದಿಗಳನ್ನು ತೀರಿಸಿಕೊಂಡು ಅರ್ಧ ಘಂಟೆಯುಳ್ಳಿಯೇ ಅವರು ತಯಾರಾದರು ಹೊರಡುವುದಕ್ಕಿಂತ ಮುಂಚೆ, ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ಸ್ವಗೃಹದಲ್ಲಿ ನೆಯಾಗಬೇಕೆಂದು ಆಗ್ರಹಪಡಿಸಿದರು. ಅಷ್ಟರಲ್ಲಿ ಶ್ರೀಗಳಾದ ದೇವದಾಸ್, ಸಿ. ರಾಜಾಜಿಯವರು, ಪ್ಯಾರೆ ಲಾಲ್‌ರವರು " ವೈಷ್ಣವಜನ ತೋತೇನೆಕಹಿಯೆ." ಎಂಬ ಗಾನವನ್ನು ಹಾಡಿದರು. ಆಗ ಮಹಾತ್ಮರು ಸಮಾಧಿಸ್ಥರಾಗಿದ್ದರು.

ನಂತರ ಸುಮಂಗಲಿಯರು ಗಾಂಧೀಜಿಯವರ ಹಣೆಗೆ ಕುಂಕುಮವನ್ನು ಹಚ್ಚಿ, ತಕಲಿಯಿಂದಮಾಡಿದ ಹಾರವನ್ನು ಹಾಕಿದರು.

ಮಃಖ ದೃಶ್ಯ

ಆ ದಿವಸ ಸೋಮವಾರ ಬಾದ್ದರಿಂದ ಮಹಾತ್ಮರು ಯಾರೊಡನೆಯೂ ಮಾತಾಡಲಿಲ್ಲ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರೂ, ಇತರ ಸ್ತ್ರೀಯರೂ, ಒಂದೇ ಸವನೆ ಕಣ್ಣೀರು ಸುರಿಸುತ್ತಿದ್ದರು. ಅವರು ದುಃಖದಲ್ಲಿಯೇ ಮಹಾತ್ಮರನ್ನು ತಬ್ಬಿದರು. ಶ್ರೀಮತಿ ಮೀರಾಬಾಯಿ (ಮಿಸ್ ಸ್ಲೇಡ್) ರವರಾದರೂ, ಗಾಂಧಿಯವರ ಪಾದಕ್ಕೆ ಬಿದ್ದು, ಅವರ ಕೈಯ್ಯನ್ನು ಮುಖಕಮಲದಲ್ಲಿಟ್ಟು, ಅಲ್ಲಿ ನಿಲ್ಲದೆ ಹೊರಟುಹೋದರು. ನಂತರ ತಮ್ಮ ಗುಡಾರಕ್ಕೆಹೋಗಿ, ಕೆಲವು ಪತ್ರಗಳನ್ನ ತೆಗೆದುಕೊಂಡು ಪೋಲೀಸಿನವರಿಗೆ ತಾವು ತಯಾರಿರುವ ಬಗ್ಗೆ ಹೇಳಿದರು ಶ್ರೀ ಮಹದೇವದೇಸಾಯಿ, ಪ್ಯಾರೇಲಾಲ್ ಮತ್ತು ಕ್ರೈಸ್ತಸೇವಾಸಂಘದ ಫುವರ್ ಎಲ್ವಿನ್‌ರವರನ್ನು ಮಹಾತ್ಮರು ಉತ್ಸಾಹಪೂರ್ವಕವಾಗಿ ತಬ್ಬಿದರು ' ಗಾಂದೀತೀಜೈ ' ಎಂಬ ಜಯಜಯ ಕಾರದಲ್ಲಿ ಮೋಟಾರ್ ಪೂನಾದಕಡೆಗೆ ತೆರಳಿತು.

ಸಂದೇಶ

ಸರ್ದಾರ್ ವಲ್ಲಭಭಾಯಿಪಟೇಲರ ಮುಖಲಕ ಕೆಳಗಿನ ಸಂದೇಶವನ್ನು ದೇಶಕ್ಕೆ ಕೊಟ್ಟರು.

ಪ್ರಿಯ ವಲ್ಲಭಭಾಯಿ!

ದೇವರ ಕರುಣೆಯು ಅಗಾಧವಾಮುದು. ಸತ್ಯ, ಅಹಿಂಸಾಮಾರ್ಗಗಳಿಂದ ಹಿಂಜರಿಯದಿರಲು, ಸ್ವರಾಜ್ಯಸಾಧನೆಗೆ ತಮ್ಮ ಪ್ರಾಣವನ್ನೂ, ಸರ್ವಸ್ವವನ್ನೂ ಅರ್ಪಿಸಲು, ದಯವಿಟ್ಟು ಜನತೆಗೆ ಕರೆಕೊಡಿ.

ಸರ್ದಾರ ಪಟೇಲರ ಕೈಸೆರೆ.

ಗಾಂಧೀಜಿಯವರನ್ನು ಯಾವ ಕಲಂದ ಪ್ರಕಾರ ಹಿಡಿದರೋ, ಅದೇ ಕಲಂದ ಮೇಲೆ ಸರ್ದಾರ ಪಟೇಲರನ್ನೂ, ತಮ್ಮ ಸ್ವಗೃಹದಲ್ಲಿ ಹಿಡಿದು ಪ್ರತ್ಯೇಕ ಮೋಟಾರಿನಲ್ಲಿ ಪೂನಾಕ್ಕೆ ಸಾಗಿಸಿದರು.

ದೇಶಕ್ಕೆಕೊಟ್ಟ ಸಂದೇಶ

" ಸರ್ಕಾರವವರು ಕಾಂಗ್ರೆಸ್ಸಿನಮೇಲೆ ಯುದ್ಧವನ್ನು ಹೂಡಿರುವರು. ಈ ನಿರ್ಣಯದಮೇಲಿಂದ, ಇದು ಕೊನೆಮೊಗವನರಿಗೂ, ಭಯಂಕರವಾದ ಯುದ್ಧವಾಗುವುದು ಎಂಥಾ ಸ್ವಾರ್ಥತ್ಯಾಗವಾದರೂ, ಇದಕ್ಕೆ ಸಾಲದು. ಆಹಿಂಸಾದೃಷ್ಟಿಯಿಂದ, ಇದಿ: ದೇಶನೇ ಆಗಾಧ ಸ್ವಾರ್ಥತ್ಯಾಗಮಾಡುವುದೆಂದು ನಾನು ನಂಬುತ್ತೇನೆ ಆಗಲೇ ಜಯವು ನಮಗೆ ಲಭಿಸುವುದು.

ಬಾಬು ಸುಬಾಸಚಂದ್ರ ಬೋಸರ ಕೈಸೆರೆ.

3—1—32 ರ ದಿವಸ ಕಾಂಗ್ರೆಸ್ ಕಾರ್ಯಕಾರಿಣಿಮಂಡಲದ ಸಭೆಯಾದಮೇಲೆ, ಸುಭಾಸಬೋಸರು ಕಲ್ಕತ್ತಾಕ್ಕೆ ಪ್ರಯಾಣಬೆಳಸಿದರು. ಕಲ್ಯಾಣ ಸ್ಟೇಷನ್ನಲ್ಲಿ ಇಬ್ಬರು ಈರೋಪಿಯರ್ ಪೋಲೀಸ್ ಅಧಿಕಾರಿಗಳು ಬಂದು, 1818 ನೇ ಇಸ್ವಿ 3 ನೇ ಕಲಂದ ಪ್ರಕಾರ ಅವರು ಶಿರೆ ಯಾಳುಗಳೆಂದು ತಿಳಿಸಿ, ಅವರ ಹಿಂದೆಯೇ ಹೊರಟರು ನಾಗಪುರದಲ್ಲಿ 3—1—32 ನೇ ಪ್ರಾತಃಕಾಲ ಶ್ರೀ ಅಣ್ಯಂಕರವರು ಅವರನ್ನು ಭೆಟ್ಟಿಯಾದರು. ಮುಂದೆ ಗೊಂಡಿಯಾ ಎಂಬಲ್ಲಿ ಅವರನ್ನು ಇಳಿಸಿ ಜಬ್ಬಲ್ಪುರದ ಕಡೆಗೆ ಸಾಗಿಸಿದರೆಂತಲೂ, ಇಂಥಾ ಸ್ವಾಸ್ಥ್ಯವೆಂಬುದು ಯಾರಿಗೂ ಗೊತ್ತಿಲ್ಲವೆಂತಲೂ ತಿಳಿದುಬಂದಿದೆ.

ಪಂಡಿತ ಜವಾಹಿರಲಾಲ್, ಕರ್ವಾನಿಯವರಿಗೆ ಶಿಕ್ಷೆ.

4—1—32 ರ ಪ್ರಾತಃಕಾಲ ಪಂಡಿತ ಜವಾಹಿರಲಾಲ್ ಮತ್ತು ಶರ್ವಾನಿಯವರ ವಿಚಾರಣೆಯು 11ಕ್ಕೆ ಪ್ರಾರಂಭವಾಯಿತು. ಅವರ ಬಂಧುಗಳನ್ನು ಮತ್ತು ಪ್ರೆಸ್‌ನವರನ್ನು ಹೊರತಾಗಿ ಮತ್ತಾರನ್ನೂ ಜೈಲಿನೊಳಕ್ಕೆ ಬಿಡಲಿಲ್ಲ. ಮುಜಾಂದರಿಬ್ಬರೂ ಒಂದೇ ಅಪರಾಧವನ್ನು ಮಾಡಿದ್ದರೂ, ಪಂಡಿತರಿಗೆ 2 ವರ್ಷ ಕಠಿಣಸಜಾ ಮತ್ತು 500 ರೂ. ದಂಡೆ, ದಂಡ ಕೊಡದಿದ್ದರೆ ಮತ್ತೆ 3 ತಿಂಗಳಶಿಕ್ಷೆ, ಶರ್ವಾನಿಯವರಿಗೆ 6 ತಿಂಗಳ ಕಠಿನಶಿಕ್ಷೆ 150 ರೂ, ದಂಡ, ಇಲ್ಲವೇ 3 ತಿಂಗಳ ಶಿಕ್ಷೆ.

ಈ ನಿರ್ಣಯವಾದೊಡನೆಯೇ ಪಂಡಿತರ ಮಾತೆಯಾದ ಶ್ರೀಮತಿ ಸ್ವರೂಪರಾಣಿನೆಹರೂಯವರು ಅವರನ್ನು ತಬ್ಬಿಕೊಂಡು, ಯಾವವಿಷಯಕ್ಕೂ ಆಲೋಚನೆ ಮಾಡಬೇಡವೆಂತ ಹೇಳಿದರು.

ಡಾ. ಅನ್ಸಾರಿಯವರ ಪ್ರಕಟಣೆ.

ಮುಸಲ್ಮಾನರ ಪೂರ್ವಜರು ಸ್ವಾತಂತ್ರ್ಯತ್ಯಾಗವೂ ರ್ವಕವಾಗಿ ಆಂದೋಲನವನ್ನು ಮಾಡಿರುವರು. ಅಂಥವರ ವಂಶಜರು ಹಿಂತೆಗೆದು ರಾಷ್ಟ್ರವನ್ನು ಬಕ್ಕತಾರಲು ಹಾಕಬಹುದೋ? ಇಲ್ಲ. ಪ್ರತಿಯೊಬ್ಬ ಮುಸಲ್ಮಾನ ತರುಣ ತರುಣಿಯರು ಸ್ವಾತಂತ್ರ್ಯಪ್ತಾಗಿಯೂ ತಮ್ಮ ನೂನದ ರಕ್ಷಣೆಗಾಗಿಯೂ ತಮ್ಮ ಸರ್ವಸ್ವವನ್ನು ಅರ್ಪಿಸುವರೆಂದು ನಂಬಿಗೆಯಿದೆ. ಮತ್ತು ಕಾಂಗ್ರೆಸ್ಸು ಹೂಡಿದ ಶಾಂತಿಯುತವಾದ ಯುದ್ಧದಲ್ಲಿ ನಮ್ಮ ಧರ್ಮ ಬಂಧುಗಳು ಪೂರ್ಣವಾಗಿ ಭಾಗವನ್ನು ವಹಿಸುವರೆಂದು ನಮ್ಮ ವಿಶ್ವಾಸವಿದೆ.

ನಾಲ್ಕು ಹೊಸ ಆರ್ಡಿನನ್ಸುಗಳು.

ಹಿಂದೂಸ್ಥಾನ ಸರಕಾರದವರು ಮತ್ತೆ ನಾಲ್ಕು ಹೊಸ ಆರ್ಡಿನನ್ಸುಗಳನ್ನು ಅಮಲಿನಲ್ಲಿ ತಂದಿರುವರು.

೧. ಹೆಚ್ಚಿನ ಅಧಿಕಾರದ ನವನನ್ನು ಪಡೆದುಳಿಂದ ಆರ್ಡಿನನ್ಸು:— ಈ ಆರ್ಡಿನನ್ಸು ವಾಯುನ್ಯೆ ಗಡಿನಾಡಿನಲ್ಲಿ ಅಮಲಿನಲ್ಲಿರುವ ಆರ್ಡಿನನ್ಸಿನಂತೆಯೇ ಇದೆ. ಸಾರ್ವಜನಿಕ ಸುರಕ್ಷತೆಗೂ ಮತ್ತು ಶಾಂತತೆಯ ರಕ್ಷಣೆಗೂ ಬಾಧೆ ತರುವಂತಹರಿಗಾಗಲಿ ಅಥವಾ ಈ ಜನರಿಗೆ ಸಹಾಯ ಮಾಡುವಂತಹ ಜನರ ಚಲನವಲನೆಯನ್ನು ನಿಯಂತ್ರಿಸುವದಕ್ಕೆ, ಸ್ಥಾನಿಕ ಸರಕಾರಕ್ಕೆ ಈ ಆರ್ಡಿನನ್ಸಿನನ್ವಯ ಅಧಿಕಾರ ತೊಡುವುವರ್ಲಿ ಬಂದಿದೆ ಈ ಹೊದಲೇ ಪ್ರಕಟಿಸಲ್ಪಟ್ಟ ಮುದ್ರಾರಾಕ್ಷಸ (ಪ್ರೆಸ್ ಆರ್ಡಿನನ್ಸು) ವು ಇದರಲ್ಲಿ ಸಮಾವೇಶವಾಗಿದೆ. ಈ ಆರ್ಡಿನನ್ಸು ಮುಂಬೈ ಮತ್ತು ಬಂಗಾಲ ಪ್ರಾಂತದಲ್ಲಿ ಬೇಗನೇ ಅಮಲಿನಲ್ಲಿ ಬರುವದಿದೆ.

೨. ಕಟ್ಟಳೆಗೆಡುವಂತೆ ಜನರಿಗೆ ಬೋಧಿಸುವವರ ವಿರುದ್ಧವಾಗಿರುವ ಆರ್ಡಿನನ್ಸು:— ಈ ಆರ್ಡಿನನ್ಸು ಈ ಹೊದಲೇ ಸಂಯು ಪ್ರಾಂತದಲ್ಲಿ ಅಮಲಿನಲ್ಲಿ ತರಲಾಗಿದೆ ಇನ್ನುಮೇಲೆ ಈ ಆರ್ಡಿನನ್ಸನ್ನು ಮುಂಬೈ, ಮದ್ರಾಸ್, ಬಿಹಾರ ಮತ್ತು ಓರಿಸಾ ಮತ್ತು ಮಧ್ಯಪ್ರಾಂತ ಈ ಪ್ರಾಂತದಲ್ಲಿ ಅಮಲಿನಲ್ಲಿ ತರಲಾಗಿದೆ.

೩. ಕಟ್ಟಳೆಗೆಡುವಂತೆ ಸಂಸ್ಥೆಗಳ ವಿರುದ್ಧವಾಗಿರುವ ಆರ್ಡಿನನ್ಸು:— ವಾಯುವ್ಯ ಗಡಿನಾಡಿನ ಪ್ರಾಂತಕ್ಕಾಗಿ ಪ್ರಕಟಿಸಿದ ಆರ್ಡಿನನ್ಸಿನಲ್ಲಿಯೇ, ಈ ಆರ್ಡಿನನ್ಸಿನ ಸಮಾವೇಶನಾಗಿದೆ. ಇದು, ಮುಂಬೈ, ಮದ್ರಾಸ್, ಬಂಗಾಲ, ಸಂಯುಕ್ತಪ್ರಾಂತ, ಬಿಹಾರ ಮತ್ತು ಓರಿಸಾ ಮತ್ತು ಮಧ್ಯಪ್ರಾಂತ ಇವುಗಳಲ್ಲಿ ಬೇಗನೇ ಅಮಲಿನಲ್ಲಿ ಬರುವದಿದೆ.

೪. ವ್ಯಾಪಾರಕ್ಕೆ ತೊಂದರೆಕೊಡುವ ಮತ್ತು ಬಹಿಷ್ಕಾರ ವಿರುದ್ಧವಾಗಿರುವ ಆರ್ಡಿನನ್ಸು:— ಕಳೆದ ಕಾಯಿದೇಭಂಗದ ಚಳವಳಿಯ ಕಾಲಕ್ಕೆ ಈ ಆರ್ಡಿನನ್ಸನ್ನು ಪ್ರಕಟಿಸಲಾಗಿತ್ತು. ಅದನ್ನೇ ಈಗ ಪುನರುಜ್ಜೀವನ ಮಾಡಲಾಗಿದೆ. ಇದು, ಇದೀ ಹಿಂದೂಸ್ಥಾನದಲ್ಲಿ ಬೇಗನೇ ಅಮಲಿನಲ್ಲಿ ಬರಲಿಯವದು.

ಪಿಕೆಟಿಂಗನ್ನು ಮಾಡದಿರಲಂತೆ!

ಶಾಂತತೆಯಿಂದ ಪಿಕೆಟಿಂಗ ಮಾಡಲಿಕ್ಕೆ ಏನೂ ಆಕ್ಷೇಪಿಯಿಲ್ಲೆಂದು ಹೊದಲಿನ ಆರ್ಡಿನನ್ಸಿನ ಮೂಲಕ ವಾಗಿ ಹೇಳಲಾಗಿತ್ತು. ಆದರೆ, ಈಗ ಆ ಹೊದಲಿನ ಆರ್ಡಿನನ್ಸಿನ ಅಮಲನ್ನು ನಿಲ್ಲಿಸಿ, ಇನ್ನುಮುಂದೆ ಶಾಂತತೆಯಿಂದ ಪಿಕೆಟಿಂಗ ಮಾಡುವದೂ ಕೂಡ ಕಟ್ಟಳೆಗೆಟ್ಟ ದ್ದೆಂದೂ, ಯಾರೂ ಪಿಕೆಟಿಂಗು ಮಾಡಬಾರದೆಂದೂ ಹುಕುಮು ಮಾಡುವದರಲ್ಲಿ ಬಂದಿದೆ.

ಸೂಚನೆ— ಚಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂದು ಹೇಳಬೇಕಾಗಿಲ್ಲ ಎಲ್ಲರೂ, ತಿಳಿಯಬೇಕು **ಸಂಪಾದಕ ಕ. ಕೇ.**

ಚಂದಾದಾರರಲ್ಲಿ ವಿನಂತಿ.

ನಾವು ಮೂರು ತಿಂಗಳಿಂದಲೂ, ತಮಗೆ ಪತ್ರಿಕೆಗಳನ್ನು ಕಳುಹಿಸುತ್ತಾ ಬಂದಿರುತ್ತೇವೆ. ಚಂದಾ ಹಣವನ್ನು ತಾವು ಕಳುಹಿಸಿಲ್ಲ. ವಿ. ಪಿ. ಮೇಲೆ ಕಳುಹಿಸುವುದು ನಿಮಗೆ ದುಬಾರಿಯಾಗಿ ಪೋಷ್ಟು ಖರ್ಚುಗಳನ್ನು ವೃಥಾ ನೀವು ಕೊಡಬೇಕಾಗುತ್ತದೆ. ತಾವು ದಯವಿಟ್ಟು, ಮನಿ ಆರ್ಡರದ ಮೇಲೆ ವಾರ್ಷಿಕ ಚಂದಾ ಹಣ 3—0—0 ಕಳುಹಿಸಿ, ಬಳ್ಳಾರಿ ಜಿಲ್ಲೆಯ ಒಂದೇ ಒಂದಾದ ಈ ಪತ್ರವನ್ನು ಅನುಗ್ರಹಿಸುವರೆಂದು ನಂಬಿರುತ್ತೇನೆ.

ವ್ಯವಸ್ಥಾಪಕ— **ಕರ್ನಾಟಕ ಕೇಸರಿ.**



ದೇಶದಲ್ಲಿ ಸದ್ಯಕ್ಕಿರುವ
ಕಾಯಿದೆಗಳಿಂದ
ಮುದ್ರಣ ಸ್ವಾತಂತ್ರ್ಯವಿಲ್ಲ.
ಸ್ವತಂತ್ರಾಭಿಪ್ರಾಯಗಳನ್ನು
ಪ್ರಕಟಿಸುವುದೂ
ಅಪರಾಧವಾಗಿ ಪರಿಣಮಿಸಿದೆ.
ಆದುದರಿಂದ

ಈ ಶಾಸನಗಳು
ತೊಲಗಿ
ದೇಶದಲ್ಲಿ ಶಾಂತಿಯು
ತಲೆದೋರುವವರೆಗೂ

ರಾಜಕೀಯ
ವಿಷಯಗಳ ಮೇಲೆ

ನಾವು
ಅಗ್ರಲೇಖನಗಳನ್ನಾಗಲೀ,
ಸಂಪಾದಕೀಯ
ವಿಚಾರಗಳನ್ನಾಗಲೀ,
ಪ್ರಕಟಿಸುವುದಿಲ್ಲ.

ವಿ ಜ್ಞಾ ಪ ನೆ.

'ಕರ್ನಾಟಕ ಕೇಸರಿ' ಸಹಕಾರ್ಯಾಂತದ ಮತ್ತು ಜಿಲ್ಲೆಯ ಸೇವೆಯಲ್ಲಿ, ಪ್ರಬಲವಾದ ಸಾಧನವಾಗಿ ಉಪಯೋಗಿಸಲ್ಪಡಬೇಕೆಂಬ ಉತ್ಕಟೇಚ್ಛೆಯಿಂದ ಸ್ಥಾಪಿಸಲ್ಪಟ್ಟಿದೆ. ಇದರ ಜನ್ಮವಾಗಿ 3 ತಿಂಗಳ ಮಾತ್ರ ವಾಗಿದೆ. ಇನ್ನು ತಾನು ಬಾಲ್ಯಾವಸ್ಥೆಯಲ್ಲಿದೆ ಅನೇಕ ಸುಧಾರಣೆಗಳಾಗಬೇಕಾಗಿದೆ. ಪತ್ರಿಕೆಯು ಜನ್ಮನೆತ್ತಲು, ಮತ್ತು ನಡೆಯಲು ತಮ್ಮ ಮನಃಪೂರ್ವಕವಾಗಿ ಸಹಾಯಮಾಡಿದ ಮತ್ತು ಮಾಡ ಮಾಡಬೇಕೆಂದಿರುವ, ಮಿತ್ರರಿಗೂ, ಮಹಾಜನಗಳಿಗೂ, ನನ್ನ ಕೃತಜ್ಞತೆಯನ್ನರ್ಪಿಸಿ, ಅವರನ್ನು ಮನಸಾ ವಂದಿಸುವೆನು.

ಆದರೆ ಈ ಕೂಸು 'ಕೇಸರಿ' ಯನ್ನು ಪೋಷಿಸುವ ಭಾರವು, ಕರ್ನಾಟಕದ ಎಲ್ಲಾ ಪ್ರಜೆಗಳ, ಮೇಲಾಗಿ ಬಳ್ಳಾರಿ ಜಿಲ್ಲೆಯವರ ಮೇಲಿದೆ ಅವರು ತಮ್ಮ ಪೈ ಮವನ್ನು, ಪೋಷಕರು, ಚಂದಾದಾರರು ಆಗುವುದರ ಮೂಲಕತೋರಿಸಿ, ಇದನ್ನು ಪಕ್ಷ, ಪ್ರಬಲವಾಗಿ ಬೆಳೆಯುವಂತೆ ಮಾಡಿ ಕೀರ್ತಿಶಾಲಿಗಳಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ರಾಜಕೀಯ ವಾತಾವರಣವು ನಿರಂತರವಾಗಿರುವುದರಿಂದ, ನಾನು ಇನ್ನುಮುಂದೆ ಸಂಪಾದಕನಾಗಿರಲು ಸಾನ್ನಿಪಿಲ್ಲವಿದೆ. ಭವಿಷ್ಯದಲ್ಲಿ ದೇಶಕ್ಕೆ ಶಾಂತಿಯು ಪ್ರಾಪ್ತವಾಗಿ, ವಾತಾವರಣವು ನಮ್ಮ ರಾಷ್ಟ್ರಕ್ಕೆ ಅನುಕೂಲವಾಗುವ ಸುಯೋಗವು ಒಳಪಟ್ಟಲ್ಲಿ, ಪುನಃ ಸಂಪಾದಕತ್ವವನ್ನು ವಹಿಸಿ ತಮ್ಮೆಲ್ಲರ ಸೇವೆಗೆ ನಿಲ್ಲುವೆನು.

[illegible] ಸೇವಕ

6—1—1932

ಕಾಂಗ್ರೆಸ್ ಅಧ್ಯಕ್ಷರುಗಳ ಕ್ರಮವಾದ ಕೈಸೆರೆ.

ಕಾಂಗ್ರೆಸ್ ಅಧ್ಯಕ್ಷರು.	ಕೈಸೆರೆಯಾದ ತಾ!
(1) **ಸರ್ದಾರ್ ವಲ್ಲಭಭಾಯಿಪಟೇಲ.**	4—1—32
(2) **ಬಾಬುರಾಜೇಂದ್ರಪ್ರಸಾದ.**	5—1—32
(3) **ಡಾಕ್ಟರ್ ಅನ್ಸಾರಿ.**	8—1—32
(4) **ಸರ್ದಾರ್ ಸರ್ದೂಲ್‌ಸಿಂಗ್**	

ಸರ್ದಾರ ಪಟೇಲರು, ಸೆರೆಯಾಗುವ ಮೊದಲು ಬಾಬುರಾಜೇಂದ್ರಪ್ರಸಾದರನ್ನು ನಿಯಮಿಸಿದ್ದರು. ರಾಜೇಂದ್ರಪ್ರಸಾದರನ್ನು ೫-1-32 ರ ದಿವಸ ಪೊಲೀಸರು ಕೈದುಮಾಡಿದರು. ಅವರ ನಿಚಾರಣೆಯು 18 1 32 ಕ್ಕೆ ಇಟ್ಟಿದ್ದಾರೆ. ಅವರಸ್ಥಳಕ್ಕೆ ಡಾ॥ ಅನ್ಸಾರಿಯವರು ನಿಯಮಿಸಲ್ಪಟ್ಟರು ಅವರು ತಾ. 8 ಕೈದಾದರು

ಈವರಿಗೆ ಕೈಸೆರೆ ಯಾಗಿರುವ ರಾಜಕೀಯ ರಂಗದ ಪ್ರಮುಖರು.

(ಎಲ್ಲಾ ಪ್ರಾಂತಗಳಲ್ಲಿಯೂ, ಸಾವಿರಾರು ಜನ ಕೈಸೆರೆ ಯಾಗಿದ್ದಾರೆ. ಮುಖ್ಯರಾದವರ ಹೆಸರನ್ನು ಕೊಟ್ಟಿರುತ್ತೇವೆ.)

ಸರಹದ್ದು ರಾಷ್ಟ್ರಗಳು.

4—1—1932 ರ ವರೆಗೆ ಒಟ್ಟಿಗೆ ಕೈಸೆರೆಯಾಗಿದ್ದವರು	2254.
ಇವರಲ್ಲಿ ಶಿಕ್ಷೆಯಾಗಿರುವವರು	639
ಕ್ಷಮಾಪಣೆ ಕೊಟ್ಟಿರುವುದು	59

ಅ. ಶ್ರೀ.

ಬೊಂಬಾಯಿ

1 ಶ್ರೀ. ವಿಠಲಭಾಯಿ ಪಟೇಲ. (ಅಸೆಂಬ್ಲಿಯ ಮಾಜಿ ಅಧ್ಯಕ್ಷರು)
2 „ ಪಾರಿಖನ್.
3 „ ಮುನ್ಷಿ.
4 „ ನಾಗಿನದಾಸ್ ಮಾಸ್ತರ್
5 „ ಜಮನಾದಾಸ್, ದ್ವಾರಕದಾಸ್.
6 „ ಪುರುಷೋತ್ತಮದಾಸ್, ತ್ರಿಕಾಂದಾಸ್.
7 „ ಎಸ್. ಎ. ಬ್ರೆಲ್ವಿ. (ಬೊಂಬಾಯಿ ಕ್ರಾನಿಕಲ್ ಸಂಪಾದಕ)
8 „ ಸ್ವಾಮಿ ಆನಂದ.
9 „ ಸಂಡಿತ ಮುಕುಂದಮಾಳವೀಯ.
10 „ ಜಯಂತಿಲಾಲ್.

ಅಹಮದಾಬಾದ್

1 ಶ್ರೀ. ಮಹದೇವದೇಸಾಯ.
2 „ ಮನಿಲಾಲ್‌ಕೋರಾರಿ.
3 „ ಕೊನಾರಪ್ಪ.
4 „ ಕಾಕಾ ಕಾಲೇಲಕರ.
5 „ ರಾಜಾರಾವ್.

ಕರಾಚಿ

1 ಶ್ರೀ ಜಯರಾಂದಾಸ್, ನೌಲತ್‌ರಾಮ್.
2 „ ಆರ್. ಕೆ. ಸಿಧ್ವ.
3 „ ತಾ! ತಾರಾಚಂದ.
4 „ ನಾರಾಯಣ್‌ದಾಸ್
5 „ ಸ್ವಾಮಿಗೋವಿಂದಾನಂದ

ದೆಲ್ಲಿ

1 ಶ್ರೀ. ಡಾ! ಅನ್ಸಾರಿ

ಅಲಹಾಬಾದ್

1 ಶ್ರೀ ಪುರುಷೋತ್ತಮದಾಸ್ ಟಾಂಡನ್.
2 „ ಪಿ ಎ ಕೆ ರಫ್ಸಾನಿ.
3 „ ಸ್ವಾಮಿ ನಾರಾಯಣ.

ಕಲ್ಕತ್ತಾ

1 ಶ್ರೀ ಬಾಬು ಸುಭಾಸಚಂದ್ರಬೋಸ್.
2 „ ಸ್ವತಾಸಗುಹರಾಯ್

ಮದ್ರಾಸ್

1 ಶ್ರೀ. ಬಿ ಸಾಂಬಮೂರ್ತಿ.
2 „ ಟಿ ಪ್ರಕಾಶಂ
3 „ ಸಿ ರಾಜಗೋಪಾಲಾಚಾರಿ.
4 „ ಎಸ್. ಸತ್ಯಮೂರ್ತಿ.

ಕರ್ನಾಟಕ

1 ಶ್ರೀ ಗಂಗಾಧರರಾವ್, ದೇಶಪಾಂಡೆ.
2 „ ಹನುಮಂತರಾವ್. ಕೌಜಲಗಿ
3 „ ಕೃಷ್ಣರಾವ್ ಮುದವೇಡಕರ.
4 „ ಸಿದ್ದಪ್ಪ ಹೊಸಮನಿ.
